ಬಡೆಕ್ಕಿಲ ವೆಂಕಟರಮಣಭಟ್

ಬೆಲೆ ರೂ. 1=50

ಹರಿಪಾರ್ಶ್ವದಾಣಿ

ಸಂದೇಹ ಸೂಚಿ

ಬರೆದವರು

ಬಡೆಕ್ಕಿಲ ವೆಂಕಟರಮಣಭಟ್
ಗೀತಾಮಂದಿರ
ಕೆದಿಲ - ಬಂಟ್ವಾಳ ತಾಲ್ಲೋಕು
ದ. ಕ.

ಮುದ್ರಕರು

ಶ್ರೀ ಚಿದಾನಂದ ಪ್ರಿಂಟಿಂಗ್ ಪ್ರೆಸ್, ಭದ್ರಾವತಿ.

ಪ್ರಸ್ತಾವನೆ

ಶ್ರೀಮದ್ರಾಮಚಂದ್ರಾಪುರ ಮಠದ ಶ್ರೀಮದ್ರಾಘವೇಂದ್ರ ಭಾರತಿಗಳವರ ಪ್ರೋತ್ಸಾಹ ಮತ್ತು ಪ್ರೇರಣೆಗಳಿಂದ ಪ್ರೇರಿತರಾಗಿ ಶ್ರೀಯುತ ವೈದ್ಯ ಗ. ಸು. ಪಾಟೀಲ ಬರಿಗೆ ಇವರು ಬರೆದ ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಇತಿಹಾಸವೆಂಬ ಗ್ರಂಥವು ಶ್ರೀ ಶ್ರೀಗಳವರ ಮಹಾಶೀರ್ವಾದ ಪ್ರಸಾದವನ್ನು ಪಡೆದು ಶ್ರೀಮದ್ರಾಮಚಂದ್ರಾಪುರ ಮಠದ ಇತಿಹಾಸ ಪ್ರಕಾಶನ ಸಮಿತಿ ತೀರ್ಥಹಳ್ಳಿ ಇದರ ಸದಸ್ಯರಾದ

ಮ|| ರಾ|| ಶ್ರೀ ಹೊಸಬಾಳೆ ಸುಬ್ಬರಾಯ (ಅಧ್ಯಕ್ಷ)

ಮ|| ರಾ|| ಶ್ರೀ ಟಿ. ತಿಮ್ಮಪ್ಪ ಹೆಗ್ಗಡೆ, ಕೆ|| ಲಿಂಗದಹಳ್ಳಿ (ಸಾಗರ)

ಮ|| ರಾ|| ಶ್ರೀ ಚಕ್ರಕೋಡಿ ಶಾಮಶಾಸ್ತ್ರಿ, ಬಿ.ಎ., ಬಿ.ಎಲ್.
ವಕೀಲ್, ಪುತ್ತೂರು.

ಮ|| ರಾ|| ಶ್ರೀ ಗಣೇಶ ಗಣಪತಿ ಭಟ್ಟ ಚಿತ್ರಿಗೆ (ಕುಮಟಾ)

ಮ|| ರಾ|| ಶ್ರೀ ಈಶ್ವರ ಕೇಶವ ಭಟ್ಟ, ಬಿ.ಎ.ಬಿ.ಎಲ್. ಬಿ.ಹೊನ್ನಾವರ

ಮ|| ರಾ|| ಶ್ರೀ ತುಂಬೆ ಸುಬ್ಬರಾವ್, ಸಾಗರ.

ಇವರಿಂದ ಇದೇ ಕಳೆದ ೧೯೫೪ ನೇ ಇಸವಿಯಲ್ಲಿ ಪ್ರಕಾಶಿತವಾಗಿ ಪ್ರಚಾರದಲ್ಲಿ ಬಂದದ್ದಾಗಿದೆ. ಇದಕ್ಕೆ ರಾಮಚಂದ್ರಾಪುರ ಮಠದಲ್ಲಿದ್ದ ಶಾಸನ, ರಹದಾರಿ, ಇತರ ದಾಖಲೆಗಳು ಅಲ್ಲದೆ ಉತ್ತರ ಖಂಡದ ಸಹ್ಯಾದ್ರಿ ಮೊದಲಾದ ಸಹಾಯಕ ಗ್ರಂಥಗಳು ಆಧಾರಗಳು. ಹೀಗಿದ್ದರೂ ಈ ಗ್ರಂಥದ ಪೀಠಿಕೆಯಲ್ಲಿ ಗ್ರಂಥಕರ್ತ ಬರಿಗೆಯವರು ಈ ರೀತಿಯ ಚರಿತ್ರೆಯನ್ನು ಬರೆಯುವುದಕ್ಕೆ ತನ್ನ ಅಸಹಾಯಕ ಸ್ಥಿತಿಯನ್ನೆಲ್ಲಾ ವಿವರಿಸಿ ವಿನಯವನ್ನು ಮೆರೆದು ಇದರ ಸಂಶೋಧನೆ ಮತ್ತು ಪರಿಷ್ಕರಣ ಸಂವರ್ಧನೆಯ ಕೆಲಸ ವಿದ್ವಾನ್ ಸಮಾಜ ಬಂಧುಗಳ ಕಡೆಗೆ ಇದೆಯೆಂದು ಹೇಳಿರುವರಲ್ಲದೆ ಇದೊಂದು ಕರಡು ಪ್ರತಿಯಾಗಿದೆಯೆಂದೂ ಹೇಳಿರುವರು. ಈ ಗ್ರಂಥವು ಕೆಲವರಿಗೆ ಅಪ್ರಿಯವೂ ಅಹಿತವೂ ಆಗಿರುವುದೆಂದು ಇದರ ಯಥಾಪ್ರತಿಯೋ ಎಂಬಂತಿರುವ ಇನ್ನೊಂದು ಗ್ರಂಥವನ್ನು ಆಮೇಲೆ ೪

ವರ್ಷ ಎಂದರೆ ೧೯೫೮ ನೇ ಇಸವಿಯಲ್ಲಿ ಬರೆದು ಇದಕ್ಕೂ ಶ್ರೀ ಶ್ರೀಗ
ವರ ಆಶೀರ್ವಾದ ಪ್ರಸಾದವನ್ನು ಪಡೆದು ಪ್ರಕಾಶನ ಸಮಿತಿಯವರ ಮೂ
ಲಕ ಪ್ರಕಟಿಸಿದ್ದಾಗಿದೆ. ಈ ಪ್ರಕಾಶನ ಸಮಿತಿಯಲ್ಲಿ ಹೊಸದಾಗಿ ಪಂ
ಗಣಪತಿ ಶಾಸ್ತ್ರಿ ಹೆಬ್ಬಾರ್ ವಾರಾಣಸೀ ಇವರನ್ನು ಸೇರಿಸಿಕೊಳ್ಳಲಾಗಿದೆ
ತುಂಬೆ ಸುಬ್ಬರಾವ್ ಸಾಗರ ಇವರನ್ನು ಬಿಟ್ಟುಬಿಡಲಾಗಿದೆ. ಹೀಗೇಕೊ
ತಿಳಿಯದಾಗಿದೆ. ಆಮೇಲೆ ಈ ಗ್ರಂಥವು ಯಾರಿಗಾದರೂ ಅಹಿತವೆಂದ
ಗಲೀ ಅಪ್ರಿಯವೆಂದಾಗಲೀ ಈವರೆಗೆ ಆಗದಿದ್ದರೂ ಇನ್ನು ಮುಂದೆ ಆ
ಬಾರದೆಂದಿಲ್ಲವಾದ್ದರಿಂದ ಭವಿಷ್ಯತ್ತಿನ ಕಡೆಗೆ ನೋಡದೆ ಎರಡನೆಯ ಗ್ರಂಥ
ಕಡೆಗೆ ನೋಡಬೇಕಾಯಿತು. ಹೀಗೆ ನೋಡುತ್ತಾಹೋದಂತೆ ಆಶ್ಚರ್ಯ
ಗಳೂ ಅಲ್ಲಲ್ಲಿ ಸಂದೇಹಗಳೂ ಉಂಟಾದುವು. ಅವುಗಳನ್ನೆಲ್ಲಾ ಯಥಾ
ಮತಿ ಬರೆದ ಈ ಚಿಕ್ಕ ಪುಸ್ತಕಕ್ಕೆ ಸಂದೇಹ ಸೂಚಿ ಎಂಬ ಹೆಸರಿಟ್ಟು
ಪ್ರಕಟ ಪಡಿಸಿದ್ದಾಗದೆ. ಇದಕ್ಕೆ ಬೇಕಾದ ನನ್ನಲ್ಲಿಲ್ಲದ ಆಧಾರಗಳನ್ನು ಒ
ಗಿಸಿ ಕೊಟ್ಟ ಶ್ರೀ ಮಿತ್ತೂರು ಪು॥ ಶಂಕರನಾರಾಯಣ ಭಟ್ಟ ವಾಲ್ತಜೆ, ಶ್ರೀ
ಎದ್ರುಕ್ಕಳ ಶಂಭು ಭಟ್ಟ ವಿದ್ವಾನ್ ಕಂಪ, ಶ್ರೀ ಯಮುಗ್ಞಂಜ ಶಂಕ
ಜೋಯಿಸ ಬೀಡಿಗೆ ಇವರಿಗೆ ನನ್ನ ಅಭಿನಂದನೆಗಳು.

ಸಮಾಜವು ಸತ್ಯಚಿತ್ರಣವನ್ನು ಕಂಡುಕೊಳ್ಳುವುದೆಂದು ಹಾರೈಸ
ಲಾಗಿದೆ. ಗದ್ಯರೂಪವಾಗಿ ಬರೆಯುವುದು ವಯೋವೃದ್ಧನಾದ ನನ್ನ ಮೊ
ಲನೆಯ ಶ್ರಮ ಸಾಧ್ಯಕೆಲಸವಾದುದರಿಂದ ಇದರಲ್ಲಿ ತೋರಿ ಬರುವ ಕುಂದು
ಕೊರತೆಗಳನ್ನು ಭಾಷಾಭಿಜ್ಞರಾದ ಸರ್ವರೂ ಮನ್ನಿಸುವರೆಂದು ನಂಬಿದ್ದೇನೆ

ಸಂನ್ಯಾಸಃ ಕರ್ಮಯೋಗಶ್ಚ ನಿಶ್ಶ್ರೇಯಸಕರಾವುಭೌ ।
ತಯೋಸ್ತು ಕರ್ಮ ಸನ್ನ್ಯಾಸಾತ್ಕರ್ಮಯೋಗೋ ವಿಶಿಷ್ಯತೆ ॥

ಎಂಬ ಭಗವದ್ವಚನವನ್ನು ಸಂನ್ಯಾಸ ಮಾರ್ಗೀಯರು ಮರೆಯದಿರಲಿ
ಜಗನ್ನಿಯಾಮಕನಾದ ಭಗವಂತನು ಸಮಾಜೋದ್ಧಾರಕರಾದಿಯಾಗಿ ಸರ್ವ
ರಿಗೂ ಸದ್ಬುದ್ಧಿಯನ್ನು ದಯಪಾಲಿಸಲಿ.

ಶ್ರೀ ಶ್ರೀ

ಇತಿ ಸಾಧುಜನಾನುವರ್ತಿ

ವೆಂಕಟರಮಣಭಟ್ಟ, ಬಡೆಕ್ಕಿಲ

ಗೀತಾಮಂದಿರ.

ಸಂದೇಹ ಸೂಚಿ

ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಸಂಕ್ಷಿಪ್ತ ಇತಿಹಾಸ ವೆಂಬ ಗ್ರಂಥಗಳು ಜನ್ಮವೆತ್ತಿದ ರೀತಿಗಳೇ ಆಶ್ಚರ್ಯವು. ಇವುಗಳು ಶ್ರೀಮದ್ರಾಮಚಂದ್ರಾಪುರದ ಶ್ರೀ ಮದ್ರಾಘವೇಂದ್ರ ಭಾರತಿಗಳ ಪ್ರೇರಣೆ ಯಿಂದ ಶ್ರೀ ವೈದ್ಯ ಗ. ಸು. ಪಾಟೀಲ ಬರಿಗೆ ಇವರಿಂದ ಬರೆಯಲ್ಪಟ್ಟು ಶ್ರೀಗಳವರಿಂದ ಮಹಾಶೀರ್ವಾದ ಪ್ರಸಾದ ಪತ್ರಗಳನ್ನು ಹೊಂದಿ ಪ್ರಕಾಶನ ಸಮಿತಿಯವರ ಮೂಲಕ ಪ್ರಕಟಗೊಂಡವುಗಳಾಗಿವೆ. ಗ್ರಂಥಗಳು ಕರಡು ಎಂದರೆ ಅಶುದ್ಧ ಪ್ರತಿಗಳೆಂದು ಗ್ರಂಥಕರ್ತರೇ ಬರೆದು ಬಣ್ಣಿಸಿರುವಾಗ ತಮ್ಮ ಪ್ರೇರಣೆಯಿಂದ ಬರೆದ ಗ್ರಂಥಗಳು ಅಶುದ್ಧವಿದ್ದರೂ ಅವುಗಳಿಗೆ ಮಠ ಪತಿಗಳು ಆಶೀರ್ವಾದ ಪ್ರಸಾದವನ್ನು ಕೊಡುವುದು ಆಶ್ಚರ್ಯವಲ್ಲದೆ ಮತ್ತೇನು.

ಸರ್ವತಂತ್ರ ಸ್ವತಂತ್ರರಾದ ನಮ್ಮ ಆಶೀರ್ವಾದ ಪ್ರಸಾದಗಳನ್ನು ಹೊಂದಿದ ಗ್ರಂಥಗಳನ್ನು ಹವ್ಯಕರು ಆಕ್ಷೇಪಿಸುವುದು ಹೇಗೆ ತಾನೇ ಸಾಧ್ಯ; ಒಂದು ವೇಳೆ ಆಕ್ಷೇಪವೆತ್ತಿದರೂ ಅಂತಹರನ್ನು ಬಾಯ್ಮುಚ್ಚಿಸಿ ಸುಮ್ಮ ನಿರಿಸುವ ಅಧಿಕಾರವು ನಮ್ಮಲ್ಲಿದೆ ಎಂಬ ದೃಢ ವಿಶ್ವಾಸವು ಮಠಪತಿಗಳಲ್ಲಿ ಇದ್ದಂತೆ ತೋರುವುದು. ಇದನ್ನಾರೂ ಗಣನೆಗೆ ತಾರದಿದ್ದುದು ಇನ್ನೂ ಆಶ್ಚರ್ಯವೆನಿಸುವುದಿಲ್ಲವೆ? ಇರಲಿ. ಇನ್ನು ಹವ್ಯಕ ಸಮಾಜದ ವಿಷಯ. ಈ ಹವ್ಯಕ ಸಮಾಜದ ವಿಷಯದಲ್ಲಿ ಇವರು ಬರೆದುದಕ್ಕಿಂತ ಹೆಚ್ಚಿನದೇನೂ ನನಗೆ ತಿಳಿದು ಬಾರದ ಕಾರಣ ಶ್ರೀ ಗುರುಮಠದ ಸಂಕ್ಷಿಪ್ತ ಇತಿಹಾಸದ ಕಡೆಗೇ ನೋಡಲಾಗಿದೆ. ಈ ಇತಿಹಾಸ ಗ್ರಂಥದಲ್ಲಿ ಕಾಣಿಸಿದಂತೆ ಶ್ರೀ ಮಚ್ಛಂಕರಾಚಾರ್ಯರು ಈ ಗೋಕರ್ಣ ಕ್ಷೇತ್ರಕ್ಕೆ ಬಂದರು. ಅಲ್ಲಿ ವರ ದೇಶಲಿಂಗದ ಹತ್ತಿರ ತಪಸ್ಸನ್ನು ಮಾಡುತಿದ್ದ ಅಗಸ್ತ್ಯಋಷಿಗಳ ಶಿಷ್ಯರ ಲ್ಲೊಬ್ಬರಾದ ವರದ ಮುನಿಗಳೆಂಬವರು ಆಚಾರ್ಯರನ್ನು ಕರೆದು ಶಂಕರಾ! ಇದೋ ನೋಡು. ಇವುಗಳು ಅಗಸ್ತ್ಯಮಹಾಮುನಿಗಳಿಂದ ಪೂಜಿಸಲ್ಪಟ್ಟ ತಪೋರಾಮಾದಿ ವಿಗ್ರಹಗಳು. ಇವನ್ನು ನಿನಗೊಪ್ಪಿಸಿದ್ದೇನೆ. ಮುಂದೆ

ಶಾಶ್ವತವಾಗಿ ಪೂಜೆ, ಪುರಸ್ಕಾರಗಳು ನಡೆಯುವಂತೆ ಮಾಡು. ನನ್ನ ಗುರು ಗಳಾದ ಅಗಸ್ತ್ಯರಿಂದ ಈ ಹಿಂದೆಯೇ ಆಜ್ಞಾಪಿಸಲ್ಪಟ್ಟವನಾಗಿ ನಿನ್ನ ಆಗಮ ನವನ್ನೇ ನಿರೀಕ್ಷಿಸುತ್ತಿದ್ದೇನೆಂದು ಹೇಳಿ ಹಿಮಾಲಯಕ್ಕೆ ತೆರಳಿಹೋದರು.

ಆಚಾರ್ಯರು ಆ ವಿಗ್ರಹಗಳೊಂದಿಗೆ ತಮ್ಮಲ್ಲಿದ್ದ ಚಂದ್ರಮೌಳೀಶ್ವರ ಲಿಂಗವನ್ನು ತಮ್ಮ ಪ್ರಶಿಷ್ಯ ವಿದ್ಯಾನಂದನ ಕೈಯಲ್ಲಿ ಶತಶೃಂಗಪರ್ವತ ಶಿಖರದ ಆಶೋಕವೆಂಬಲ್ಲಿ ಮಠವೊಂದನ್ನು ನಿರ್ಮಿಸಿ ಎಲೈ ವಿದ್ಯಾನಂದಾ! ನೀನು ಇಲ್ಲಿಯೇ ಉಳಿದು ದಿನನಿತ್ಯ ಮಹಾಬಲೇಶ್ವರನ ದರ್ಶನ ಮಾಡುತ್ತಾ ತಪೋರಾಮಾದಿ ವಿಗ್ರಹಗಳನ್ನು ಚಂದ್ರಮೌಳೀಶ್ವರ ಲಿಂಗವನ್ನು ಅರ್ಚಿಸು ತ್ತಿದ್ದು ಹೈವ ದ್ರಾವಿಡ ಬ್ರಾಹ್ಮಣರ ಆಚಾರ ವಿಚಾರಗಳನ್ನು ನಿರೀಕ್ಷಿಸುತ್ತಾ ಶಿಷ್ಯಪರಂಪರೆಯನ್ನೂ ಮಠಾಧಿಪತ್ಯವನ್ನೂ ನಡೆಸಿಕೊಂಡು ಹೋಗು. ಎಂದು ಆಚಾರ್ಯರು ಹೇಳಿದುದಕ್ಕೆ ವಿದ್ಯಾನಂದರು ತಮ್ಮ ಪರಮ ಗುರು ಗಳ ಆಜ್ಞೆಯನ್ನು ಶಿರಸಾವಹಿಸಿ ಅಲ್ಲಿಯೇ ನಿಂತರು.

ರಘುಕುಲೋತ್ತಮನಾದ ಶ್ರೀ ರಾಮನೇ ಈ ಮಠದ ಮುಖ್ಯಾಧಿ ದೇವನಾದ್ದರಿಂದ ಇದಕ್ಕೆ ರಘೂತ್ತಮ ಮಠವೆಂದು ಹೆಸರಿಡಲಾಯಿತು. ಇಲ್ಲಿ ಆಲೋಚಿಸಲಾಗಿ ಅಗಸ್ತ್ಯ ಮಹರ್ಷಿಗಳು ತ್ರೇತಾಯುಗದವರು. ಅವರ ಶಿಷ್ಯ ಈ ವರದ ಮುನಿಗಳು ಆ ಕಾಲದವರೇ ಆಗಿರಬೇಕಷ್ಟೆ. ಹೀಗಿದ್ದರೂ ಆ ವರದ ಮುನಿಗಳು ತಮ್ಮ ಗುರುಗಳಾದ ಅಗಸ್ತ್ಯ ಋಷಿಗಳ ಇಚ್ಛೆಯನ್ನು ಪೂರೈಸುವುದಕ್ಕಾಗಿ ತ್ರೇತಾಯುಗದ ಮುಂದಿನಕಾಲ ಆಮೇಲೆ ದ್ವಾಪರಾ ಯುಗದ ಪೂರ್ಣಕಾಲ ಆಮೇಲೆ ಕಲಿಯುಗದ ಈ ವರೇಗಿನಕಾಲ ಇಷ್ಟು ಕಾಲ ಜೀವಂತರಾಗಿ ಉಳಿದಿದ್ದರೆಂದು ನಿಶ್ಚೈಸುವುದು ಹಾಸ್ಯಾಸ್ಪದವೆಂದು ಇವರಿಗೆ ತೋರದಿದ್ದುದು ವಿಚಿತ್ರವೇ ಸರಿ. ಇರಲಿ.

ಇವರೆನ್ನುವಂತೆ ಈ ಗೋಕರ್ಣದ ರಘೂತ್ತಮ ಪೀಠದ ಮೊತ್ತ ಮೊದಲಿನ ಪೀಠಾಧಿಪತಿಗಳು ವಿದ್ಯಾನಂದಾಚಾರ್ಯರು. ಇವರನ್ನು ಪೀಠ ಕ್ಕೇರಿಸಿದವರು ಶ್ರೀ ಮಚ್ಛಂಕರಾಚಾರ್ಯರು. ಈ ಮಠದ ಸ್ಥಾಪನೆಯು ಕ್ರಿ. ಶ. ೭೨೦ ರಲ್ಲಿ ಎಂದಿರುವರು. ಇದಕ್ಕೆ ಯಾವ ಆಧಾರವೂ ಕಂಡ

ಬರುವುದಿಲ್ಲವೆಂಬುದು ಮಾತ್ರವಲ್ಲ ಶ್ರೀ ಮಚ್ಛಂಕರಾಚಾರ್ಯರು ಗೋಕರ್ಣ ದಲ್ಲಿ ಮಠವೊಂದನ್ನು ಸ್ಥಾಪಿಸಿದ್ದರೆಂದು ಇತರ ಯಾವ ಗ್ರಂಥಗಳಿಂದಲೂ ದಾಖಲೆಗಳಿಂದಲೂ ತಿಳಿದು ಬರುವುದಿಲ್ಲ. ಆಚಾರ್ಯರು ಅವತರಿಸಿದ ಕಾಲ ದಲ್ಲಿ ಭಾರತದೊಳಗೆ ಶಾಲಿವಾಹನ ಶಕದ ಪ್ರಚಾರವಲ್ಲದೆ ಕ್ರಿ.ಶಕದ ವ್ಯವ ಹಾರವಿದ್ದಿಲ್ಲ. ಈ ವ್ಯವಹಾರವು ಬಳಕೆಯಲ್ಲಿ ಬಂದುದು ಆಂಗ್ಲರ ಆಳ್ವಿಕೆ ಯಲ್ಲಿ. ಹೀಗಿರುವಾಗ ಶಾಲಿವಾಹನ ಶಕ ವರ್ಷಕ್ಕೆ ಸರಿಹೊಂದುವಂತೆ ಪರಿವರ್ತಿಸಿದ ಕ್ರಿ. ಶಕ ವರ್ಷ ೭೨೦ ಎನ್ನದೆ ಆಚಾರ್ಯ ಶಂಕರರು ಕ್ರಿ.ಶ. ೭೨೦ ರಲ್ಲಿ ಮಠಸ್ಥಾಪನೆ ಮಾಡಿದರೆಂದು ಅಪ್ರಾಸಂಗಿಕವಾಗಿ ನುಡಿದರೆ ಅಸಂಗತವಾಗಿ ಮಾತಾಡಿದಂತಾಗುವುದಿಲ್ಲವೇ?

ಆದುದರಿಂದ ಇತ್ತಿತ್ತಲಾಗಿ ಆಂಗ್ಲರ ಆಳ್ವಿಕೆಯಲ್ಲಿ ಕ್ರಿ.ಶಕವು ಪ್ರಚಾ ರಕ್ಕೆ ಬಂದ ತರುವಾಯ ಆವನೋ ಒಬ್ಬನು ತನ್ನ ಕಲ್ಪನಾಶಕ್ತಿಯ ಬಲ ದಿಂದಲೇ ಬರೆದಿರಿಸಿದ್ದನೆಂದು ತಿಳಿಯಬೇಕಾಗುತ್ತದೆ. ಸಕಾಲದಲ್ಲಿ ಬರೆ ದಿಡುತಿದ್ದರೆ ಶಾಲಿವಾಹನ ಶಕವನ್ನೇ ಬಳಸ ಬೇಕಾಗಿತ್ತು. ಅದಕ್ಕೆ ಸರಿ ಯಾಗಿ ಕ್ರಿ. ಶಕವನ್ನು ಕಾಣಿಸಬೇಕಿತ್ತಲ್ಲವೇ ? ಕ್ರಿ.ಶ. ೭೧೦ ಶ್ರೀಮದಾ ಚಾರ್ಯರ ನಿರ್ವಾಣವೆಂದು ಲೋಕಮಾನ್ಯ ತಿಲಕರು ಅವರ ಗೀತಾರಹಸ್ಯ ವೆಂಬ ಗ್ರಂಥದಲ್ಲಿ ಕಾಣಿಸಿರುವಾಗ ಶ್ರೀ ತಿಲಕರ ಗ್ರಂಥವನ್ನು ಆಧಾರವಾಗಿ ಇಟ್ಟುಕೊಂಡ ಇವರು ಮಠಸ್ಥಾಪನೆಯು ಕ್ರಿ. ಶ. ೭೨೦ ಎಂದು ಹೇಗೆ ಹೇಳುವರೋ ?

ಹೊಳೆನರಸೀಪುರದ ಸಚ್ಚಿದಾನಂದೇಂದ್ರ ಸ್ವಾಮಿಯವರು ೧೯೬೩ ರಲ್ಲಿ ಬರೆದ ಶಂಕರಭಗವತ್ಪಾದ ವೃತ್ತಾಂತ ಸಾರ ಸರ್ವಸ್ವವೆಂಬ ಗ್ರಂಥದಲ್ಲಿ ತೋರಿ ಬರುವಂತೆ.ಶೃಂಗೇರಿಯ ಶಂಕರಾನಂದ ಭಾರತಿಯವರ ಶಿಷ್ಯ ಮಾಧವ ಭಾರತಿ ಗಳೆಂಬವರು ಕ್ರಿ. ಶ. 1448-54 ರ ಒಳಗಾಗಿ ಗೋಕರ್ಣದಲ್ಲಿ ಮಠ ವೊಂದನ್ನು ಸ್ಥಾಪಿಸಿದ್ದರೆಂದು ಗೊತ್ತಾಗುತ್ತದೆ.

ಇದರಿಂದ ಗೋಕರ್ಣ ಮಠವು ಶ್ರೀ ಶಂಕರಾಚಾರ್ಯರಿಂದ ಕ್ರಿ.ಶ.

೭೨೦ ರಲ್ಲಿ ಸ್ಥಾಪಿತವಾದುದೆಂಬುದು ಸಂದೇಹಾಸ್ಪದವಾಗಿದೆಯೆಂದು ತಿಳಿಯ ಬೇಕಾಗುತ್ತದೆ. ಇದರೊಂದಿಗೆ ಇನ್ನೊಂದು ವಿಷಯವೆಂದರೆ ಶ್ರೀಮಚ್ಛಂಕರಾ ಚಾರ್ಯರು ಮಠಗಳ ಸಂಸ್ಥಾಪಕರಲ್ಲದೆ ಎಲ್ಲಿಯೂ ಮಠಪತಿಗಳಾಗಿದ್ದರೆಂದು ಯಾವ ಗ್ರಂಥದಿಂದಲೂ ತಿಳಿದು ಬಾರದಿರುವಾಗ ಈ ಗೋಕರ್ಣ ಮಠದ ೧ ನೇ ಪೀಠಾಧಿಪತಿ ವಿದ್ಯಾನಂದಾಚಾರ್ಯರಿಗೆ ಮೊದಲ ಸ್ಥಾನವನ್ನು ಕೊಡದೆ ಪೀಠಪರಂಪರಾ ಪಟ್ಟಿಯಲ್ಲಿ ೧ ಶಂಕರಾಚಾರ್ಯ ೨ ಸುರೇಶ್ವರಾ ಚಾರ್ಯ ೩ ವಿದ್ಯಾನಂದಾಚಾರ್ಯ ಹೀಗೆ ಕಾಣಿಸಿರುವುದೇಕೆ ? ಶೃಂಗೇ ರಿಯ ಸುರೇಶ್ವರಾಚಾರ್ಯರನ್ನೊಳಗೊಂಡ ಈ ಪಟ್ಟಿಯು ಕೆಕ್ಕಾರಿಗೆ ಕವ ಲೊಡೆದುದಲ್ಲದೆ ರಾಮಚಂದ್ರಾಪುರ ಮಠದಲ್ಲಿ ಕಾಲೂರಿ ಇಂದಿನ ೩೫ ನೇ ಶ್ರೀ ಮದ್ರಾಘವೇಂದ್ರಭಾರತಿಗಳವರೆಗೂ ಬೆಳೆಯುತ್ತಾ ಬಂದಿದೆ. ಮಠಪತಿ ಗಳೆನಿಸಿಕೊಳ್ಳದ ಶ್ರೀ ಶಂಕರಾಚಾರ್ಯರನ್ನು ಗೋಕರ್ಣದ ೧ ನೆಯವರೆಂದೂ ಶೃಂಗೇರಿ ಪೀಠದ ಮೊದಲಿಗರಾದ ಸುರೇಶ್ವರಾಚಾರ್ಯರನ್ನು ಇಲ್ಲಿಗೆ ಎರಡನೆಯವರೆಂದೂ ಈ ಗೋಕರ್ಣ ಮಠಕ್ಕೆ ಮೊದಲಿಗರಾದ ವಿದ್ಯಾನಂದಾ ಚಾರ್ಯರನ್ನು ೩ ನೆಯವರೆಂದೂ ಕ್ರಮಾಂಕದಲ್ಲಿ ಕಾಣಿಸಿರುವರೇಕೋ ತಿಳಿಯ ದಾಗಿದೆ. ಶೃಂಗೇರಿ ಪೀಠದ ೧ ನೇ ಮಠಪತಿಗಳಾದ ಸುರೇಶ್ವರಾಚಾರ್ಯ ರನ್ನು ಆಚೆಗೂ ಈಚೆಗೂ ಜಗ್ಗಿ ೨ ನೆಯವರಾದ ನಿತ್ಯಬೋಧಘನಚಾರ್ಯ ರಿಗೆ ೩ ನೆಯ ಸ್ಥಾನವನ್ನು ಕಲ್ಪಿಸಿದ ಇತಿಹಾಸದ ಅತಿರೇಕ ವರ್ತನೆಯು ವಿಷಾದವನ್ನುಂಟುಮಾಡುವುದಾಗಿದೆ. ಗೋಕರ್ಣ ಮಠದ ಕುರಿತು ಇವರು ಹೇಳುವಂತೆ ಕ್ರಿ. ಶ. ೭೨೦ ರ ಮೊದಲ್ಗೊಂಡು ೧೪೬೪ ರವರೆಗೆ ಆದ ಮಠ ಪತಿಗಳು ೯ ಮಂದಿ. ಇವರ ಮಧ್ಯಾವಧಿ ಕಾಲವು ೭೪೪ ವರ್ಷಗಳು ಸರಿಯಷ್ಟೆ. ಇವುಗಳನ್ನು ಸರಾಸರಿ ಹಂಚಿಹಾಕುವಲ್ಲಿ ಪ್ರತಿಯೊಬ್ಬ ಮಠ ಪತಿಯೂ ವರ್ಷ ೮೨ ತಿಂಗಳು ೮ ರಂತೆ ಪೀಠಸ್ಥರಾಗಿರಬೇಕು. ಹೀಗೆ ಪೀಠಸ್ಥರಾದ ಈ ಮಠಪತಿಗಳೆಲ್ಲರೂ ನೂರುವರ್ಷಕ್ಕೆ ಕಡಿಮೆಯಾಗದಷ್ಟು ಕಾಲ ಬದುಕಿದ್ದರೆಂದು ತಿಳಿಯಬೇಕಾಗುತ್ತದೆ.

ಇದರಂತೆಯೇ ರಾಮಚಂದ್ರಾಪುರ ಮಠವು ಸ್ಥಾಪನೆಯಾದುದು ಕ್ರಿ. ಶ. ೧೫೦೦ ರಲ್ಲಿ. ಕ್ರಮಾಂಕದಂತೆ ಪೀಠಸ್ಥರಾದ ರಾಮಚಂದ್ರ ಭಾರತಿಗಳಿಂದ

೯ ನೆಯವರಾದ ರಘುನಾಥ ಭಾರತಿಗಳು ಪೀಠಕ್ಕೆ ಬಂದ ಕಾಲ ೧೫೬೫ ನೇ ಕ್ರೋಧನ ಸಂವತ್ಸರವಾಗಿದೆ. ಮಧ್ಯಂತರ ಕಾಲವು ೬೫ ವರ್ಷ. ಸರಾಸರಿ ಹಂಚಿ ಹಾಕಿದಲ್ಲಿ ಪ್ರತಿಯೊಬ್ಬನೂ 8 ವರ್ಷ $1\frac{1}{2}$ ತಿಂಗಳು ಮಾತ್ರ ಬದುಕಿದ್ದರೆಂದು ತಿಳಿಯಬೇಕಾಗುತ್ತದೆ. ಇವರು ಇಷ್ಟು ಅಲ್ಪಾಯುಗಳಾದರೇಕೋ ತಿಳಿಯದಾಗಿದೆ. ಗೋಕರ್ಣದವರು ಧೀರ್ಘಾಯುಗಳು. ರಾಮಚಂದ್ರಪುರದವರು ಅಲ್ಪಾಯುಗಳು. ಹೀಗಾಗುವ ಸಾಧ್ಯಾ ಸಾಧ್ಯತೆಗಳನ್ನು ಸಾಮಾಜಿಕರು ಅಥವಾ ವಿಚಾರ ಶೀಲರು ಗಮನಿಸ ಬೇಕಾಗಿದೆ.

ಮುಂದೆ ಲೇಖಾಂಕ ೨ ರಿಂದ ಪೀಠಿಕೆಯ ಪ್ರಕರಣದವರೆಗೂ ಮಠಾಧಿಪತಿಗಳೆಂದರೆ ಗುರುಗಳು. ಸಾಮಾಜಿಕರೆಲ್ಲರೂ ಶಿಷ್ಯರು ಎಂದು ಹೇಳುತ್ತಾ ಬಂದುದನ್ನು ದೃಢ ಪಡಿಸುವುದಕ್ಕಾಗಿ ಗ್ರಂಥಕರ್ತರು ಶ್ರುತಿ ಸ್ಮೃತಿ ಪುರಾಣೇತಿಹಾಸಗಳ ಆಧಾರಗಳನ್ನು ಕೊಟ್ಟು

ಗುರು ಮೂಲಾಃ ಕ್ರಿಯಾಃ ಸರ್ವಾಃ ಭುಕ್ತಿ ಮುಕ್ತಿ ಫಲಪ್ರದಾಃ |
ತಸ್ಮಾತ್ಸರ್ವ್ವೋ ಗುರುರ್ನಿತ್ಯಂ ಮುಕ್ತ್ಯರ್ಥಂ ಸುಸಮಾಹಿತೈಃ ||

ಎಂಬ ಶ್ಲೋಕಾರ್ಥವನ್ನು ಬರೆದು ಮಠಪತಿಗಳು ಗುರುಗಳೆಂದೇ ಸಮರ್ಥಿಸಿರುವರು. ಈ ಸಮರ್ಥನೆಯಿಂದ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಪ್ರದಾತರು ಗುರುಗಳೆಂಬ ಮಠಪತಿಗಳು. ಅವರ ಹೊರತು ಅನ್ಯಥಾ ಶರಣಂ ನಾಸ್ತಿ ಎಂದು ಅರ್ಥವಾಗುವಂತೆ ತೋರುವುದು. ಆದರೆ ನಿತ್ಯ ಸಂಧ್ಯಾವಂದನೆಯಲ್ಲಿ ಓಂ ಹ್ರೀಂ ಪರಮಾತ್ಮಾದ್ಯಶೇಷ ಗುರು ಪಾರಂಪರ್ಯ ಕ್ರಮೇಣ ಸ್ವಗುರು ಪಾದಾಂಬುಜಂ ಯಾವತ್ತಾವತ್ ಪ್ರಣೋಮಿ ಎಂದು ಹೇಳುವ ಗುರುಪರಂಪರೆಯು ಯಾವುದು? ಸ್ವಗುರು ಎಂದರೆ ಯಾರು ? ಇವರಾರಿಗೂ ಪುರುಷಾರ್ಥಗಳನ್ನು ಕೊಡುವ ಸಾಮರ್ಥ್ಯವಿಲ್ಲವೇ ? ಎಂದು ಕೇಳಬೇಕಾಗುವುದು. ಮತ್ತು ಮಹಾಭಾರತ, ರಾಮಾಯಣ ಗ್ರಂಥಗಳಲ್ಲಿ ಹೇಳಿರುವಂತೆ – ಶ್ಲೋಕ

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯ ಮಜಾನತಃ |
ಉತ್ಪಥ। ಪ್ರತಿಪನ್ನಸ್ಯ ಪರಿತ್ಯಾಗೋ ವಿಧೀಯತೆ ||

ಎಂಬ ಪರಿತ್ಯಾಗಕ್ಕೆ ಪಾತ್ರರಾದ ಗುರುಗಳು ಎಂತವರೆಂದೂ ಕೇಳ ಬೇಕಾಗುವುದು.

ಗ್ರಂಥಕರ್ತರು ತಮ್ಮ ಮಾತಿನ ಸಮರ್ಥನೆಗಾಗಿ ಮಠಾಮ್ನಾಯದ ಕೆಲವು ಶ್ಲೋಕಗಳನ್ನು ಅಲ್ಲಲ್ಲಿ ಕಾಣಿಸಿರುವರು. ಅವುಗಳ ಪೈಕಿ

ಧರ್ಮೋ ಮೂಲಂ ಮನುಷ್ಯಾಣಾಂ ಸಚಾಚಾರ್ಯಾವಲಂಬನಃ |
ತಸ್ಮಾದಾಚಾರ್ಯ ಸುಮಣೇಃ ಶಾಸನಂ ಸರ್ವತೋಧಿಕಂ ||

ಈ ಶ್ಲೋಕವನ್ನು ಅರ್ಥವಿವರಣೆಗಳೊಂದಿಗೆ ಸ್ವತಃ ಮಠಪತಿಗಳೇ ಹೇಳುವುದನ್ನು ಎಲ್ಲರೂ ಕೇಳಿರುವರು. ಅವರು ಹೇಳುವ ಅರ್ಥದ ತಾತ್ಪರ್ಯ ಮನುಷ್ಯರಿಗೆ ಧರ್ಮವೇ ಮೂಲವು. ಈ ಧರ್ಮಕ್ಕೆ ಆಚಾರ್ಯರೇ ಅವ ಲಂಬನೆಯು. (ಆಶ್ರಯಸ್ಥಾನ) ತಸ್ಮಾತ್ = ಆದಕಾರಣದಿಂದ ಆಚಾರ್ಯ ಸುಮಣೇಃ ಶಾಸನಂ ಸರ್ವತೋಧಿಕಂ = ಎಂದರೆ ಆಚಾರ್ಯ ರತ್ನರಾದವರ ಶಾಸನವು ಎಲ್ಲಕ್ಕೂ ಹೆಚ್ಚಿನದು. ಆದುದರಿಂದ ನಮ್ಮ ಶಾಸ ನವೇ ಎಲ್ಲಕ್ಕೂ ಹೆಚ್ಚಿನದು. ಅದರಂತೆ ಎಲ್ಲರೂ ನಡೆಯಬೇಕೆಂದೂ ಹೇಳಿದರೆ ಬಹಿರಾಚರಣೆಯಲ್ಲಿ ಇವರಂತಿರುವ ಬೇರೆ ಮಠಪತಿಗಳು. ಅಂತರಾ ಚರಣೆಯಲ್ಲಿ ಸ್ತ್ರೀವ್ಯಸನಿಗಳೂ, ವಂಚಕರೂ, ವಚನಭ್ರಷ್ಠರೂ ಆಗಿರುವವರು ನಾವೇ ಆಚಾರ್ಯಮಣಿಗಳು, ನಾವೇ ಶಾಸನಕರ್ತರು, ನಾವು ಹೇಳುವ ನಮ್ಮ ಶಾಸನವೇ ಎಲ್ಲದಕ್ಕೂ ಹೆಚ್ಚಿನದೆಂದರೆ ಅದಕ್ಕೇನು ಹೇಳಬೇಕು ಶ್ರೀ ಶ್ರೀಗಳವರೇ ಉತ್ತರ ಕೊಡಬೇಕಷ್ಟೆ. ಇದಕ್ಕಾಗಿಯೇ ಶ್ರೀ ಮಚ್ಛಂ ಕರಾಚಾರ್ಯರು ನಮ್ಮ ಶಿಷ್ಯರಿಗೆ ಮಾತ್ರ ನಾವು ಧರ್ಮ ಸಮ್ಮತವಾದ ಶಾಸನಕರ್ತರೆಂದು ಹೇಳಿರುವರಲ್ಲದೆ ಮನುಷ್ಯ ವರ್ಗಕ್ಕೆಲ್ಲಾ ನಾವೇ ಶಾಸನ ಕರ್ತರೆಂದು ಹೇಳಿಕೊಂಡಿರುವುದಿಲ್ಲ.

ಇದರಂತೆ ಯಾವ ಮಠಪತಿಗಳಾದರೂ ತಮ್ಮ ಶಿಷ್ಯರಿಗೆ ಮಾತ್ರ ತಾವು ಧರ್ಮ ಸಮ್ಮತ ಶಾಸನ ಕರ್ತರೆಂದು ಹೇಳಬಹುದಲ್ಲದೆ ಇತರರಿಗೆ ನಾವು ಹೇಳಿದುದೇ ಶಾಸನ, ನಾವೇ ಶಾಸನ ಕರ್ತರೆಂದು ಹೇಳುವ ಅಧಿ ಕಾರವಿರುವುದೆಂದು ಎಲ್ಲಿಯೂ ಕಂಡುಬರುವುದಿಲ್ಲ. ಮಠಪತಿಗಳು ಗುರು

ಳೆಂದೂ ಸಾಮಾಜಿಕರು ಶಿಷ್ಯರೆಂದೂ ಲೌಕಿಕ ವ್ಯವಹಾರದ ಮೂಲಕ ಾಢಿಯಲ್ಲಿ ಬಂದಿರುವುದಲ್ಲದೆ ಶಾಸ್ತ್ರ ಸಮ್ಮತವಲ್ಲವೆಂದು ಪಂಡಿತರ ಅಭಿ ಪ್ರಾಯವಿರುವುದು. ಆದುದರಿಂದ ಮೇಲೆ ಹೇಳಿದ ಧರ್ಮೋ ಮೂಲಂ। ಂಬ ಶ್ಲೋಕಕ್ಕೂ ಅರ್ಥವು ಬೇರೆ ಇರುವುದೆಂದು ಪಂಡಿತರ ಅಭಿಪ್ರಾಯ. ಲ್ಲದಿದ್ದರೆ ಸಂನ್ಯಾಸಿಗಳ ಹೊರತು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಂಬ ಮೂರು ತೆರನಾದ ಆಶ್ರಮಸ್ಥರು ಮತ್ತು ಆಚಾರ್ಯ ಪೀಠಕ್ಕೆ ಯೋಗ್ಯರಾದ ಮಠಪತಿಗಳನ್ನೇ ದಂಡಿಸುವ ಅಧಿಕಾರವಿರುವ ವಿದ್ವಾಂಸರು ುತ್ತು ಶ್ರೀಮದಾಚಾರ್ಯರ ಅವತಾರಕ್ಕಿಂತ ಎಷ್ಟೋ ವರ್ಷಗಳ ಹಿಂದೆಯೇ ನ್ಮವೆತ್ತಿದ ಶ್ರೀಮದ್ಬೋಧಾಯನಾಚಾರ್ಯರ ಗೃಹ್ಯಸೂತ್ರಪದ್ಧತಿಗಳನ್ನು ಳಕೆಯಲ್ಲಿರಿಸಿಕೊಂಡ ಪುರೋಹಿತ ವರ್ಗದವರು. ಇವರೆಲ್ಲರೂ ಅಪೌರು ೀಯಗಳೆಂಬ ವೇದಗಳ ಮತ್ತು ಅವುಗಳಿಂದ ಹುಟ್ಟಿದ ಧರ್ಮಶಾಸ್ತ್ರಗಳ ಾಸನಗಳನ್ನು ಹೊತ್ತ ಸಾಮಾಜಿಕರೇ ಆಗಿರುವುದರಿಂದ, ಇಂತವರಿಂದೊಡ ೂಡಿದ ಸಮಾಜದ ಮೇಲೆ ತಮ್ಮ ಹೊಸ ಹೊಸ ಅವೈದಿಕ ಶಾಸನ ಳನ್ನು ಹೊರಿಸುವ ಅಧಿಕಾರವು ಮಠಪತಿಗಳಿಗಿದೆಯೇ ? ಇದ್ದಂತೆ ೋರುವುದಿಲ್ಲ.

ಆದುದರಿಂದ ಸಮಾಜದಲ್ಲಿ ಧರ್ಮಭ್ರಷ್ಟನಾದವನು ಎಂತವನೇ ಇರಲಿ ಾಸ್ಪಿತಷ್ಠನನ್ನು ವಿಚಾರಿಸಿ ವಿದ್ವತ್ಸಭೆಯ ತೀರ್ಮಾನದಂತೆ ದಂಡಿಸುವುದು ುತ್ತು ಸಂಚಾರ ಕ್ರಮವಿಟ್ಟುಕೊಂಡು ಧರ್ಮೋಪದೇಶ ಮಾಡುವುದು, ಮ್ಮ ಸದಾಚರಣೆಯ ಮೂಲಕ ಸಮಾಜಕ್ಕೆ ಮಾರ್ಗದರ್ಶಕರಾಗುವುದು ಾತ್ರ ಮಠಪತಿಗಳ ಅಧಿಕಾರವೆಂದು ಸೂಕ್ಷ್ಮಾವಲೋಕನದಿಂದ ತಿಳಿಯ ಹುದಾಗಿದೆ. ಹೀಗೆ ಆಳವಾಗಿ ಪರಿಕಿಸಿ ಮಠಪತಿಗಳ ಅಧಿಕಾರವೆಷ್ಟು? ಮ್ಮ ಯೋಗ್ಯತೆಯೇನು? ಮಠಕ್ಕೂ ಸಮಾಜಕ್ಕೂ ಇರುವ ಸಂಬಂಧವು ಾವುದು ಮೊದಲಾದ ಸತ್ಯಸ್ಥಿತಿಯನ್ನು ತಿಳಿದುಕೊಳ್ಳದೆ ಬಾಹ್ಯಾಡಂಬ ದ ಸೋಗಿಗೆ ಸೋತು ಪರಮ ಭಕ್ತರಾಗಿ ಮಠಪತಿಗಳ ಪಾಲಕಿಗೆ ಹೆಗ ೂಡ್ಡುವ ಸಮಾಜ ಬಾಂಧವರ ವಿಷಯದಲ್ಲಿ ವಿಷಾದಿಸ ಬೇಕಾಗಿದೆ. ಈ ೀಳಿಕೆಯು ಕೆಲವರಿಗೆ ವಿಷ ಬೀಜಾಂಕುರವಾಗಿ ತೋರಿದರೆ ಆಶ್ಚರ್ಯವಿಲ್ಲ.

ಇನ್ನು ಇವರ ಇತಿಹಾಸ ಗ್ರಂಥದಲ್ಲಿ ಕಾಣಿಸಿರುವಂತೆ ಉತ್ತ
ಗೋಕರ್ಣ, ದಕ್ಷಿಣಕ್ಕೆ ಮಲೆಯಾಳ, ಪಶ್ಚಿಮಕ್ಕೆ ಅರಬಿ ಸಮುದ್ರ, ಪೂರ್ವ
ಪಲ್ಲವರಾಜ್ಯ ಹೀಗೆ ಚತುರ್ಗಡಿ ಗುರುತುಗಳನ್ನು ಗುರ್ತಿಸಿ ಹವ್ಯಕ ಮಂ
ವೆಂಬ ಹೆಸರಿನ ಭೂಪಟವೊಂದನ್ನು ಚಿತ್ರೀಕರಿಸಲಾಗಿದೆ. ಈ ಭೂಭಾ
ಯಾವ ಕಾಲದಲ್ಲಿ ಯಾವ ರಾಯನ ಆಳ್ವಿಕೆಗೆ ಒಳಪಟ್ಟಿತ್ತೆಂದಾಗಲಿ ಇ
ಯಾವ ಮಠಪತಿಗಳ ಸಂಚಾರ ಭೂಮಿಯಾಗಿತ್ತೆಂದಾಗಲಿ ತಿಳಿದು ಬ
ದಿಲ್ಲ. ಇದರಿಂದ ಹವ್ಯಕ ಮಂಡಲವೆಂಬ ವಿಸ್ತಾರವಾದ ಭೂಪ್ರದ
ವಿತ್ತೆಂಬುದು ಸಂದೇಹಕ್ಕೆಡೆಯಾಗಿದೆ.

ಸನದು ಸೂತ್ರಗಳ ವಿಚಾರ

ಗೋಕರ್ಣ ಮಠದ ವಿದ್ಯಾನಂದಾಚಾರ್ಯರಿಂದ ೮ ನೆಯವರಾ
ಕ್ರಮಾಂಕ ೧೦ ಚಿದ್ಬೋಧ ಭಾರತಿ ಇವರಿಗೆ ಶ್ರೀ ವಿದ್ಯಾರಣ್ಯರು ಕೊ
ವೈಭವ ತಾಮ್ರ ಶಾಸನ.

ಶಾಸನದ ಪೂರ್ಣಪಾಠ:– ಶ್ರೀ ಗಣೇಶಾಯ ನಮಃ ಸ್ವಸ್ತಿ ||
ನಮಸ್ತುಂಗ ಶಿರಸ್ತುಂಗ ಚಂದ್ರಚಾಮರ ಚಾರವೇ |
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ||

ಶ್ರೀ ಮನ್ಮಹಾರಾಜಾಧಿರಾಜ ವೀರ ಪರಮೇಶ್ವರ ವೀರಪ್ರತಾಪ ದೇ
ರಾಜ ಮಹಾರಾಜ ವಿಜಯ ನಾನಾ ದೇಶದ ರಾಜಧಾನಿಯಲ್ಲಿಯೂ ಒ
ಸಮಸ್ತದೇಶಗಳನ್ನು ಸ್ವಧರ್ಮದಲ್ಲಿ ಪರಿಪಾಲಿಸುತ್ತಂ ಇದಂದಿನ ಶಕವ
೧೩೧೧ ನೆಯ ಶುಕ್ಲ ಸಂವತ್ಸರದ ಮಾಘ ಬಹುಳ ೩೦ ರಲ್ಲು ಶ್ರೀಮತ್ಪರ
ಹಂಸ ಪರಿವ್ರಾಜಕಾಚಾರ್ಯವರ್ಯ ಶ್ರೀಮತ್ ಭಗವತ್ಪಾದ ಪೂಜ್ಯ ಶ
ಶ್ರೀಮಚ್ಛಂಕರಾಚಾರ್ಯ ಶಿಷ್ಯ ಸುರೇಶ್ವರಾಚಾರ್ಯ ಪರಂಪರೆ ಪುರಸ್
ಭೋಗವರ್ಧನ ವಾಲ ಪುರುಷಾಧಿಷ್ಠಿತರಹ ಋಷ್ಯಶೃಂಗ ಪುರಾಧಿವಾಸ ಕೃ
ತೀರ್ಥ ಗುರು ಕರಕಮಲ ಸಂಜಾತರಹ ವಿದ್ಯಾರಣ್ಯ ಶ್ರೀ ಪಾದಂಗಳು,
ಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಶ್ರೀಮದ್ಭೋಗವರ್ಧನವಾ

ಪುರಷಾಧಿಷ್ಠಿತರಾದ ಗೋಕರ್ಣದ ರಘೂತ್ತಮ ಮಠದ ಸೀತಾರಾಮಚಂದ್ರ ಭಾರತೀ ಶಿಷ್ಯ ಚಿದ್ಬೋಧಭಾರತೀ ಸ್ವಾಮಿಗಳಿಗೆ ಕೊಟ್ಟ ವೈಭವ ತಾಮ್ರ ಶಾಸನ ಭಾಷಾಕ್ರಮವೆಂತೆಂದರೆ–

ಪೂರ್ವದಲ್ಲು ನಮ್ಮ ಋಷ್ಯಶೃಂಗ ಪುರಾಧಿವಾಸ ನಿತ್ಯಬೋಧ ಘನಾಚಾರ್ಯ ಜ್ಯೇಷ್ಠ ವಿದ್ಯಾನಂದಾಚಾರ್ಯ ಕವಲಿನ ಪರಂಪರೆ ಪುರಸ್ಸರವಾಗಿ ಹೈವ ದೇಶಸ್ಥಿತ ಹೈವ ದ್ರಾವಿಡ ಸಂಜ್ಞಿತ ಬ್ರಾಹ್ಮಣ್ಯ ಧರ್ಮಾಚಾರ ವಿಚಾರ ತತ್ಪುರಸ್ಸರ ಪ್ರಾಯಶ್ಚಿತ್ತ, ಅಗ್ರತೇಜ ಪೂಜೆ ಸ್ಥಾನಮಾನ್ಯ ಗೋಕರ್ಣ ಮಂಡಲಾಚಾರ್ಯತ್ವ ಮದಲಹವ್ವು ಪ್ರಕಾಶಿಸಿ ಬಹದರಿಂದಲೂ ಉಭಯ ಸಾಂಪ್ರದಾಯ ಏಕವಹದರಿಂದಲೂ ಶ್ರೀಮಹಾಬಲೇಶ್ವರ ಸನ್ನಿಧಿಯಲ್ಲು ನಿಮಗೆ ಸಿಂಹಾಸನ, ಕಿರೀಟ, ತಿರ್ಯಗಾಂದೋಲಿಕ ಶ್ವೇತಛತ್ರ, ಉಭಯಚಾಮರ, ಮಕರ ತೋರಣ, ವ್ಯಜನ, ಹಗಲು ಜ್ಯೋತಿ ಪೀತಶಂಗವರ್ಣ ಪತಾಕಾದಿ ಚಿನ್ಹೆಗಳಲ್ಲಿ ತಾಳ ಶಂಖ ಚಕ್ರಾದಿ ವಾದ್ಯ ಮೊದಲಾದ್ದನ್ನು ನಾನಾದೇಶಗತ ಜನ ಸಮೂಹದಲ್ಲಿ ಅಧಿಕರಿಸಿ ಕೊಟ್ಟೆವು. ನೀವು ನಿಮ್ಮ ಶಿಷ್ಯ ಪರಂಪರವಾಗಿ, ಸಿಂಹಾಸನಾರೂಢರಾಗಿ, ಕಿರೀಟಭೃತರಾಗಿ ತಿರ್ಯಗಾಂದೋಳಿಕಾರೋಹಣರಾಗಿ, ಶ್ವೇತಛತ್ರ, ಉಭಯಚಾಮರ ಮಕರ ತೋರಣ, ವ್ಯಜನ ಹಗಲುಜ್ಯೋತಿ, ಪೀತಶಂಗವರ್ಣ ಪತಾಕಾದಿ ಚಿನ್ಹೆಗಳಿಂದ, ತಾಳ ಶಂಖ ಚಕ್ರಾದಿ ವಾದ್ಯಗಳಿಂದ ಯುಕ್ತವಾಗಿ ನಾಲ್ಕು ದೇಶಗಳನ್ನು ಸಂಚರಿಸಿ, ಪ್ರಕಾಶಿತರಾಗಿ ಪೂರ್ವಮರ್ಯಾದ ಶ್ರೇಷ್ಠರಾಗಿ ಹೈವದೇಶಸ್ಥಿತ, ಹೈವದ್ರಾವಿಡ ಸಂಜ್ಞಿತ ಬ್ರಾಹ್ಮಣ್ಯದ ಧರ್ಮಾಚಾರ ವಿಚಾರ ತತ್ಪುರಸ್ಸರ ಪ್ರಾಯಶ್ಚಿತ್ತ ಅಗ್ರತೇಜ ಪೂಜೆ, ಸ್ಥಾನಮಾನ್ಯ, ಗೋಕರ್ಣ ಮಂಡಲಾಚಾರ್ಯತ್ವ ಮೊದಲಾದ್ದನ್ನು ಪ್ರಕಾಶಿಸಿಕೊಂಡು, ಆಚಂದ್ರಾರ್ಕ ಸ್ಥಾಯಿಗಳಾಗಿ ಬಹರಿಯಂತ ಕೊಟ್ಟ ವೈಭವ ತಾಮ್ರ ಶಾಸನ ಶ್ರೀ ಶ್ರೀ

ಈ ಶಾಸನಕ್ಕೆ ಬರೆಕೊಟ್ಟ ಶ್ರೀ ವಿದ್ಯಾರಣ್ಯರ ಹಸ್ತಾಕ್ಷರದ ಸಹಿ ಇಲ್ಲ. ಬರೆದವರಾರೆಂಬುದೂ ಇಲ್ಲ. ಬೇರೆ ಸಾಕ್ಷಿಯೂ ಇಲ್ಲ, ಎಂದಾದಮೇಲೆ ಇದನ್ನು ಶ್ರೀ ವಿದ್ಯಾರಣ್ಯರೇ ಕೊಟ್ಟರೆಂದು ಹೇಗೆ ಹೇಳುವರೋ ತಿಳಿಯದಾಗಿದೆ. ಹೆಚ್ಚೇಕೆ ಈ ಕಾಲದಲ್ಲಿ ಶ್ರೀ ವಿದ್ಯಾರಣ್ಯರೇ ಜೀವಂತ

ವಾಗಿದ್ದಿಲ್ಲವೆಂದು ಈ ಕೆಳಗೆ ಕಾಣಿಸಿದ ಆಧಾರಗಳಿಂದ ಕಂಡುಕೊಳ್ಳಬ
ದಾಗಿದೆ.

ಶ್ರೀ ಬಲದೇವ ಉಪಾಧ್ಯಾಯ ಎಂ.ಎ. ಸಾಹಿತ್ಯಾಚಾರ್ಯ, ಪ್ರಧ
ನಾಧ್ಯಾಪಕ, ಸಂಸ್ಕೃತ ಪಾಲೀವಿಭಾಗ, ಹಿಂದೂ ವಿಶ್ವವಿದ್ಯಾನಿಲಯ ಕಾಶಿ
ಅನುವಾದಕ ಯಸ್. ರಾಮಚಂದ್ರ ಶಾಸ್ತ್ರಿ, ಎಂ. ಎ. ಇವರು 1950 ನೆ
ಇಸವಿಯಲ್ಲಿ ಬರೆದ ಶ್ರೀ ಶಂಕರಾಚಾರ್ಯರು ಎಂಬ ಗ್ರಂಥದ 244 ನೆ
ಪುಟದಲ್ಲಿ ವಿದ್ಯಾರಣ್ಯರು ವಿಕ್ರಮಶಕ 1443 ಅಂದರೆ ಕ್ರಿ. ಶಕದ 138
ರಲ್ಲಿ ನಿರ್ವಾಣ ಹೊಂದಿದರೆಂದು ಬರೆದಿರುತ್ತಾರೆ.

ಹೊಳೆನರಸೀಪುರದ ಹಿಂದೆ ಹೇಳಿದ ಸಚ್ಚಿದಾನಂದೇಂದ್ರ ಸರಸ್ವತಿ
ಸ್ವಾಮಿಗಳವರು ಇದೇ ೧೯೬೩ ನೇ ಇಸವಿಯಲ್ಲಿ ಬರೆದ ಶ್ರೀ ಶಂಕರ ಭಗ
ವತ್ಪಾದ ವೃತ್ತಾಂತ ಸಾರ ಸರ್ವಸ್ವ ಎಂಬ ಬೃಹದ್ಗ್ರಂಥದ ಪುಟ ೪೬೦-
೪೬೧ ರಲ್ಲಿ ಶ್ರೀ ವಿದ್ಯಾರಣ್ಯರು ಕ್ರಿ.ಶ. ೧೩೮೬ ರಲ್ಲಿ ಸಮಾಧಿಸ್ಥರಾದರೆಂದ
ಉಲ್ಲೇಖಿಸಿರುತ್ತಾರೆ. ಮತ್ತು ೧೩೮೯ ರಲ್ಲಿ ನರಸಿಂಹಭಾರತಿಗಳು ಪಟ್ಟಕೆ
ಬಂದರೆಂದೂ ಸ್ಪಷ್ಟಪಡಿಸಿದ್ದಾರೆ. ಸುಪ್ರಸಿದ್ಧ ಕಾದಂಬರಿಕಾರರಾದ ಅ.ನ.ಕೃ
ರಾಯರು ೧೯೫೮ ನೇ ಇಸವಿಯಲ್ಲಿ ಬರೆದ ವಿಜಯ ವಿದ್ಯಾರಣ್ಯವೆಂ
ಗ್ರಂಥದ ನಿವೇದನೆಯಲ್ಲಿ ವಿದ್ಯಾರಣ್ಯರು ಕ್ರಿ. ಶ. ೧೩೮೬ ರಲ್ಲಿ ಮುಕ್ತರಾ
ರೆಂದು ಬರೆದಿರುತ್ತಾರೆ. ಮತ್ತು ತಪೋಬಲವೆಂಬ ಗ್ರಂಥದ ಪುಟ ೧೬
ರಲ್ಲಿ ವಿದ್ಯಾರಣ್ಯರು ಕ್ಷಯ ಸಂವತ್ಸರದ ಜ್ಯೇಷ್ಠ ಬಹುಳ ೧೩ (ಹದಿಮೂರು
ಶನಿವಾರದಂದು ಸಮಾಧಿಸ್ಥರಾದರೆಂದು ಬರೆದಿರುವರು. ಗಣನಾ ಕಾಲ
ಕ್ರಿ. ಶ. ೧೩೮೬ ಆಗುವುದೆಂದೂ ಟಿಪ್ಪಣಿಯಲ್ಲಿ ಕಾಣಿಸಿರುತ್ತಾರೆ.

ಹಿಂದೆ ಹೇಳಿದಂತೆ ಗೋಕರ್ಣದ ಚಿದ್ಬೋಧಭಾರತಿಗಳಿಗೆ ಶ್ರೀ ವಿದ್ಯಾ
ರಣ್ಯರು ಕೊಟ್ಟ ತಾಮ್ರ ಶಾಸನದ ಕಾಲವು ಶಾ.ಶ. ೧೩೧೧. ಇದಕ್ಕೆ ಸ
ಯಾದ ಕ್ರಿ. ಶಕವು ೧೩೮೯ ಎಂದಾಗುತ್ತದೆ. ಇವುಗಳನ್ನು ತುಲನೆ ಮಾ
ನೋಡಿದಲ್ಲಿ ಈ ತಾಮ್ರ ಶಾಸನವನ್ನು ಕೊಡುವ ಕಾಲಕ್ಕಿಂತ ಮೂ
ವರ್ಷಕ್ಕೆ ಮೊದಲಾಗಿಯೇ ಶ್ರೀವಿದ್ಯಾರಣ್ಯರು ಸಮಾಧಿಸ್ಥರಾದರೆಂದು ತಿಳಿ

ಬೇಕಾಗುತ್ತದೆ.

ಇದರಂತೆ ಇತಿಹಾಸದ ಮೊದಲ ಮುದ್ರಣವನ್ನು ಪರಿಶೀಲಿಸಿದಲ್ಲಿ ಈ ಚಿದ್ಬೋಧಭಾರತಿಗಳಿಗೆ ಶ್ರೀ ವಿದ್ಯಾರಣ್ಯರು ಕೊಟ್ಟ ವೈಭವ ತಾಮ್ರ ಶಾಸನದ ಕಾಲವು ಶಾ. ಶ. ೧೩೨೧ ನೆಯ ಶುಕ್ಲ ಸಂವತ್ಸರದ ಮಾಘ ಬಹುಳ ೩೦ ಎಂದಿರುವುದು. ಇದನ್ನು ಲೆಕ್ಕಿಸುವಾಗ ಶ್ರೀ ವಿದ್ಯಾರಣ್ಯರ ನಿರ್ವಾಣ ಕಾಲವು ೩ ವರ್ಷಕ್ಕೆ ಮಿಕ್ಕಿ ಹದಿಮೂರಾಗುವುದು. ಸಂವತ್ಸರವೂ ಬದಲಾಗುವುದು. ಆದುದರಿಂದ ವಿಚಾರವಂತರಾದವರು ಈ ಶಾಸನವನ್ನು ನಂಬುವುದು ಕಷ್ಟಸಾಧ್ಯವೆಂದು ವಿಷಾದದಿಂದ ಹೇಳಬೇಕಾಗಿದೆ. ಇನ್ನು ಎರಡನೆಯ ಇನ್ನೊಂದು ಶಾಸನವನ್ನು ಪರಿಶೀಲಿಸೋಣ. ಅದರ ಪೂರ್ಣಪಾಠ

ಶ್ರೀ ಗಣಾಧಿಪತಯೇ ನಮಃ

ನಮಃಸ್ತುಂಗ ಶಿರಸ್ತುಂಗ ಚಂದ್ರಚಾಮರ ಚಾರವೇ ।
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ॥

ಶ್ರೀ ಮನ್ಮಹಾರಾಜಾಧಿರಾಜ ಪರಮೇಶ್ವರ ವೀರಪ್ರತಾಪ ಇಮ್ಮಡಿ ದೇವರಾಯ ಮಹಾರಾಯರು ವಿಜಯನಾದೇಶದ ರಾಜಧಾನಿಯ ದೃಷ್ಟಿ ಸಮಸ್ತ ದೇಶಗಳನ್ನು ಸದ್ಧರ್ಮದಲ್ಲು ಪರಿಪಾಲಿಸುತ್ತುಂ ಇದಂದಿನ ಶಾಲಿವಾಹನ ಶಕ ವರುಷ ೧೩೪೬ ನೇ ಸ್ವಭಾನು ಸಂ॥ದ ಭಾದ್ರಪದ ಕೃಷ್ಣ ೨ ಗುರುವಾರ ರೇವತಿ ನಕ್ಷತ್ರ ಕನ್ಯಾ ಸಂಕ್ರಾತಿ ಸಂಯಮಕಾಲೇ ಹೇಮಾದ್ರಿ ತಟ ಶ್ರೀಮತ್ ತುಂಗಭದ್ರಾ ತೀರದಲ್ಲು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಶ್ರೀಮದ್ಭಗವತ್ಪಾದ ಪೂಜ್ಯ ಶಿಷ್ಯ ಶ್ರೀ ಶಂಕರಾಚಾರ್ಯ ಶಿಷ್ಯ ಸುರೇಶ್ವರಾಚಾರ್ಯ ಶಿಷ್ಯ ವಿದ್ಯಾನಂದಾಚಾರ್ಯ ಪರಂಪರ ಪುರಸ್ಸರ ಭೋಗವರ್ಧನವಾಲ ಪುರುಷಾಧಿಷ್ಟಿತಠಹ ಶತಶೃಂಗ ಪುರಾಧಿವಾಸ ಶ್ರೀಚಿದ್ಬೋಧಭಾರತಿ ಶ್ರೀಪಾದಂಗಳ ಗುರುಕರಕಮಲ ಸಂಜಾತ ಶ್ರೀಮದ್ರಾಮಚಂದ್ರಪಾದ ಪದ್ಮ ಶ್ರೀ ಗೋಕರ್ಣ ರಘೂತ್ತಮ ಮಠದ ರಾಘವೇಶ್ವರಭಾರತೀ ಶ್ರೀ ಪಾದಂಗಳಿಗೆ ಇಮ್ಮಡಿ ದೇವರಾಯ ಮಹಾರಾಯರು

ಪೊಡವಟ್ಟು ಕೊಟ್ಟ ವೈಭವ ತಾಮ್ರಶಾಸನ ಕ್ರಮವೆಂತೆಂದರೆ:-

ಪೂರ್ವದಲ್ಲು ವಿದ್ಯಾರಣ್ಯ ಶ್ರೀ ಪಾದಂಗಳು ಗೋಕರ್ಣದ ಶ್ರೀ ಮಹಾ ಬಲೇಶ್ವರ ದೇವರ ಸನ್ನಿಧಿಯಲ್ಲಿ ನಿಮ್ಮ ಪೂರ್ವಾಧಿಷ್ಠಿತರಹ ಚಿದ್ಬೋ ಭಾರತೀ ಶ್ರೀಪಾದಂಗಳಿಗೆ ಸಿಂಹಾಸನ, ಕಿರೀಟ, ತಿರ್‍ಯಗಾಂದೋಲಿಕ, ಶ್ವೇ ಛತ್ರ, ಉಭಯಚಾಮರ, ಮಕರತೋರಣ, ವ್ಯಜನ, ಹಗಲುಜ್ಯೋತಿ ಪೀತ ಪಿಶಂಗವರ್ಣ, ಪತಾಕಾದಿ ಚಿನ್ಹೆ, ತಾಳ, ಶಂಖ, ಚಕ್ರಾದಿವಾದ್ಯ ವೊ ಲಾದ್ದನ್ನು ಕೊಟ್ಟು ಪ್ರಕಾಶಿಸಿ ಬಹದ್ದರಿಂದ ಈಗ ಶ್ರೀ ವಿರೂಪಾಕ್ಷದೇವ ಸನ್ನಿಧಿಯಲ್ಲಿ ನಿಮಗೆ ಪಂಚ ದೀವಟಿಕಾದ್ವಯ ಆಂದೋಲಿಕೋಪರೀ ಪಂ ಕಲಶ ವೊದಲಾದವನ್ನು ಅಧಿಕರಿಸಿ ಕೊಟ್ಟೆವಾಗಿ ನೀವು ನಿಮ್ಮ ಶಿಷ್ಯ ಪಾರಂ ಪರ್ಯವಾಗಿ ಪಂಚ ದೀವಟಿಕಾದ್ವಯ ತಿರ್‍ಯಗಾಂದೋಲಿಕೋಪರಿ ಪಂಚಕಲ ವೊದಲಾದ್ದರಿಂದ ಯುಕ್ತರಾಗಿ ನಾಲ್ಕು ದೇಶವನ್ನು ಸಂಚರಿಸಿ ಪ್ರಕಾಶಿ ಆಚಂದ್ರಾರ್ಕಸ್ಥಾಯಿಗಳಾಗಿ ಬಹಿರಿ ಎಂದು ಕೊಟ್ಟ ವೈಭವ ತಾಮ್ರಶಾಸನ ಲೇಖಕ ಕೃಷ್ಣವೀರಣ್ಣಾಚಾರ್ಯ. ಶ್ರೀ ವಿರೂಪಾಕ್ಷ ಅಂತ ರುಜು ಉಂಟು ವರಾಹ ರೂಪಿನ ಮುದ್ರೆ ಇದೆ. ದಾಖಲೆ ತಾರೀಕು ೮ ಆಗೋಸ್ತ ೧೮೩ ನಂಬ್ರ ೧೩೬. ೧೮೩೩ ಇಂಗ್ಲೀಷ್ ಸಹಿ ಉಂಟು.

ಅ. ನ. ೪೭ ನೇ ಹುಕುಮು ಪ್ರಕಾರ ಇದರ ಸಹಿ ನಕಲು ನಂಬ್ರದಲ್ಲ ವಿಲೆ ಇಟ್ಟು, ಇದನ್ನು ಶ್ರೀ ರಾಘವೇಂದ್ರಭಾರತೀ ಸ್ವಾಮಿಗಳವರ ವಕೀ ಮಂಜುನಾಥಯ್ಯಗೆ ಕೊಟ್ಟ ತಾ. ೧೯ ನೇ ಫೆಬ್ರುವರಿ ೧೮೬೦ ನೇ ಇಸವಿ ಇಂಗ್ಲೀಷ್ ಸಹಿ ಉಂಟು.

ಈ ಶಾಸನದಲ್ಲಿ ವಿಜಯನಾ ರಾಜಧಾನಿ ಎಂದು ಬರೆಯಲಾಗಿದೆ ಅದು ಯಾವ ರಾಜಧಾನಿ ಎಂದು ಅರ್ಥವಾಗುತ್ತಿಲ್ಲ. ಆದರೂ ವರಾ ಮುದ್ರೆ ಇದೆ. ಶ್ರೀ ವಿರೂಪಾಕ್ಷನ ರುಜು ಇದೆ, ಎಂಬುದರಿಂದ ವಿಜಯ ನಗರದ ರಾಜಧಾನಿ ಎಂದು ಅನುಮಾನದಿಂದ ನಿಶ್ಚಯಿಸಬೇಕಾಗಿದೆ. ಶಾಸ ಕರ್ತರು ಕೊಟ್ಟಿದ್ದು ಪಂಚದೀವಟಿಕಾದ್ವಯ ಮತ್ತು ಆಂದೋಲಿಕೋಪ ಪಂಚಕಲಶ ಮಾತ್ರ. ಮಿಕ್ಕವುಗಳೆಲ್ಲವೂ ಚಿದ್ಬೋಧಭಾರತಿಗಳಿಗೆ ತಾಳಶಂ ಗಳ ಸಮೇತ ವಿದ್ಯಾರಣ್ಯರು ಕೊಟ್ಟದ್ದೆಂದು ಹೇಳಲಾದ ಬಿರುದುಗಳಾಗಿವೆ

ಆದುದರಿಂದ ಆ ಮೊದಲ ಶಾಸನದ ಅಬಲತೆಯನ್ನು ಸಬಲಗೊಳಿಸುವುದಕ್ಕಾಗಿಯೇ ಈ ಎರಡನೆಯ ಶಾಸನವು ಜನ್ಮ ತಾಳಿತೋ ಎಂಬ ಸಂದೇಹಕ್ಕೆ ಎಡೆಕೊಡುವಂತಾಗಿದೆ. ಅಲ್ಲದಿದ್ದರೆ ಮಹಾನುಭಾವರಾದ ಇಮ್ಮಡಿ ದೇವರಾಯರು ವಿದ್ಯಾರಣ್ಯರ ಶಾಸನವನ್ನು ಏಕೆ ಎತ್ತಿ ಕಟ್ಟಬೇಕಾಗಿತ್ತು. ಹೆಚ್ಚಿನಗೊಡವೆಗೆ ಹೋಗದೆ ಇವರಿಗೆ ಇಷ್ಟೇ ಸಾಕೆಂದು ಉಪೇಕ್ಷಿಸಿದರೇ ತಿಳಿಯುವಂತಿಲ್ಲ. ಶಾಸನದಲ್ಲಿ ಶ್ರೀವಿರೂಪಾಕ್ಷ ಎಂಬ ಸಹಿ ಮತ್ತು ವರಾಹ ಮುದ್ರೆ ಇದ್ದಮಾತ್ರಕ್ಕೆ ಇದನ್ನು ಇಮ್ಮಡಿ ದೇವರಾಯರೇ ಕೊಟ್ಟರೆಂದು ನಂಬುವವರು ನಂಬಬಹುದಷ್ಟೆ. ಇದಕ್ಕಾಗಿಯೇ ಈ ಶಾಸನವನ್ನು ಸ್ಥಿರಪಡಿಸುವುದಕ್ಕಾಗಿ ಶ್ರೀರಾಮಚಂದ್ರಾಪುರದ ೩೨ ನೇ ಶ್ರೀ ರಾಘವೇಂದ್ರ ಭಾರತಿಗಳು ಮುಂದೆ ಬ್ರಿಟಿಷ್ ಸರಕಾರವನ್ನು ಆಶ್ರಯಿಸಿದರೇ ಎಂಬ ಅನುಮಾನವು ಆ ಶಾಸನದ ಇಂಗ್ಲೀಷ್ ಸಹಿ ಉಂಟು ಎಂಬ ಕೊನೆಯ ವಾಕ್ಯದಿಂದ ಸಿದ್ಧವಾಗುತ್ತಿದೆ. ವಿಷಯಗಳೆಲ್ಲವೂ ಗುಪ್ತ. ಇನ್ನು ಮೇಲೆ ಹೇಳಿದ ಈ ಶಾಸನವು ಶಾ. ಶ. ೧೩೬೬ ಎಂದರೆ ಕ್ರಿ. ಶ. ೧೪೪೪ ರಲ್ಲಿ ಇಮ್ಮಡಿದೇವರಾಯರಿಂದ ಕೊಡಲ್ಪಟ್ಟದ್ದೆಂದಾಗುವುದು. ಆದರೆ ಕೆ.ಎ. ನೀಲಕಂಠಶಾಸ್ತ್ರಿ, ಎಂ.ಎ. ಇವರು ಇಂಗ್ಲೀಷಿನಲ್ಲಿ ಬರೆದ “ಎ ಹಿಸ್ಟರಿ ಆಫ್ ಸೌತ್ ಇಂಡಿಯಾ” ಎಂಬ ಗ್ರಂಥದಲ್ಲಿ ಈ ಇಮ್ಮಡಿದೇವರಾಯರು ಕ್ರಿ.ಶ. 1446-49 ರ ಒಳಗಾಗಿ ತೀರಿಹೋದರೆಂದು ಉಲ್ಲೇಖಿಸಿರುತ್ತಾರೆ. ಇದನ್ನು ಇಂಗ್ಲಿಷ್ ಬಲ್ಲವರಿಂದ ತಿಳಿದುಕೊಂಡದ್ದಾಗಿದೆ. ಮತ್ತು ಅ.ನ.ಕೃ.ಅವರು ಕ್ರಿ. ಶ. ೧೯೫೯ ರಲ್ಲಿ ಬರೆದ ಪುಣ್ಯಪ್ರಭಾ ಎಂಬ ಗ್ರಂಥದ ಮುನ್ನುಡಿಯಲ್ಲಿ ಇಮ್ಮಡಿದೇವರಾಯರು ಕ್ರಿ. ಶ. ೧೪೨೨ ರಿಂದ ೧೪೪೪ ರ ವರೆಗೆ ಮಾತ್ರ ಬದುಕಿ ರಾಜ್ಯವಾಳಿದನೆಂದೂ ತಿಳಿದುಬರುತ್ತದೆ. ಹೀಗೆ ಮಠದ ಅಸ್ತಿತ್ವಕ್ಕೆ ಸಾಧನಗಳಾದ ಸನದು ಸೂತ್ರಗಳೇ ಸಂದೇಹಾಸ್ಪದಗಳಾದರೆ ಐತಿಹ್ಯಗಳಿಗೆ ದೇವರೇಗತಿ ಎನ್ನಬೇಕಾಗುತ್ತದೆ. ಮಠಕ್ಕೆ ಸಂಬಂಧಪಟ್ಟ ರಹದಾರಿಗಳು ೩೭ ರಲ್ಲಿ ಒಂದಾದರೂ ಪ್ರಕಾಶಿತವಾಗಲಿಲ್ಲ. ಅದೇಕೋ ತಿಳಿಯದಾಗಿದೆ.

ಗೋಕರ್ಣದ ರಘೂತ್ತಮ ಮಠದ ರಾಘವೇಶ್ವರಭಾರತಿಗಳಿಗೂ ಇವರ ಶಿಷ್ಯರಾದ ರಾಮಚಂದ್ರಭಾರತಿಗಳಿಗೂ ಪರಸ್ಪರ ಕಲಹಗಳುಂಟಾಗಿ ಪರಮಾ

ವಸ್ಥೆಗೆ ಮುಟ್ಟಿದ್ದರಿಂದ ಸಕಲ ವೈಭವಗಳಿಂದೊಡಗೂಡಿದ ಆ ಗೋಕರ್ಣ
ಮಠವನ್ನು ಒಗಡಿಸಿದ ತುತ್ತಿನಂತೆ ಅಸಹ್ಯವಾಗಿ ಕಂಡು ಮಠದಿಂದ ಓ
ಹೋದ ರಾಮಚಂದ್ರಭಾರತಿಗಳು ಶರಾವತೀ ತೀರದಲ್ಲಿ ಕ್ರಿ. ಶ. ೧೫೦೦ ರ
ಸ್ಥಾಪಿಸಿದ ಮಠವೇ ರಾಮಚಂದ್ರಾಪುರ ಮಠವು. ಇಲ್ಲಿಯೂ ಕ್ರಿ. ಶ.
೧೫೦೦ ಎಂಬುದಕ್ಕೆ ಆಧಾರವಿಲ್ಲ.

ಈ ರಾಘವೇಶ್ವರ ಭಾರತಿಗಳ ಮತ್ತೊಬ್ಬ ಶಿಷ್ಯರಾದ ರಘೂತ್ತಮ
ಭಾರತಿಗಳು ಮಠದಿಂದ ಹೊರಟುಹೋಗಿ ಕೆಕ್ಕಾರಿನಲ್ಲಿ ಸ್ಥಾಪಿಸಿದ ಮಠ
ರಘೂತ್ತಮ ಮಠವು.

ರಾಘವೇಶ್ವರ ಭಾರತಿಗಳು ಮುಕ್ತರಾದರು. ಗೋಕರ್ಣ ಮಠ
ವಿಚ್ಛಿತ್ತಿಯುಂಟಾಯಿತು. ಆದರೂ ವರದ ಮುನಿದತ್ತ ತಪೋ ರಾಮಾ
ವಿಗ್ರಹಗಳಿಗೂ ಚಂದ್ರಮೌಳೀಶ್ವರ ಲಿಂಗಕ್ಕೂ ಅಂದಿನಿಂದ ಇಂದಿನವರೆ
ಪೂಜಾಕಾರ್ಯಗಳು ಸಾಂಗವಾಗಿ ಯಾರಿಂದಲೋ ನಡೆಯುತ್ತಾ ಇದ
ರಾಮಚಂದ್ರಾಪುರ ಮಠದಲ್ಲಿ ಅವರೇ ಸ್ಥಾಪಿಸಿದ ಸೀತಾರಾಮಾದಿ ಬೇ
ವಿಗ್ರಹಗಳು ಅಸ್ತಿತ್ವದಲ್ಲಿ ಬಂದವು. ಇದರಂತೆ ಗೋಕರ್ಣ ಮಂಡಲದ
ಇವರು ಹೇಳುವಂತೆ ಸುಮಾರು ೪೦ರವರೆಗೂ ಅದ್ವೈತ ಮಠಗಳು ಸ್ಥಾ
ನೆಯಾದುವು. ಇವುಗಳಲ್ಲಿ ರಾಮಚಂದ್ರಾಪುರ ಮಠವು ಪ್ರಧಾನ ಮ
ವಾಯಿತು. ಹೇಗಾಯಿತೆಂಬುದಕ್ಕೆ ತಕ್ಕ ಸಮಾಧಾನವಿಲ್ಲ.

ಗೋಕರ್ಣ ಮಂಡಲಾಧೀಶ್ವರರೂ ಇವರೇ ಆದರು. ಹೀಗೆ ಆಗ
ತಿದರೆ ಸಂತೋಷವಿತ್ತು. ಆದರೆ ಹೀಗೆ ಯಾವ ಯಾವ ಮಠಪತಿಗಳ
ಮೊದಲು ಹೇಳುತ್ತಿದ್ದರೆಂದು ನಮಗೆ ತಿಳಿಯದು. ಬಲಿಷ್ಠರಾದ ಸ್ವಣ
ವಲ್ಲೀ (ಹೊನ್ನೇಹಳ್ಳಿ) ಮಠಪತಿಗಳು ಈಗಲೂ ಗೋಕರ್ಣ ಮಂಡಲ
ಧೀಶ್ವರರು ಎಂದು ಹೇಳಿಕೊಳ್ಳುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ
ದ್ವೈತವಾದಿಗಳಾದ ಪರ್ತಗಾಳಿ ಮಠಪತಿಗಳೂ ತಾವೂ ಗೋಕರ್ಣಮಂ
ಲಾಧೀಶ್ವರರೆಂದು ಹೇಳಿಕೊಳ್ಳುವರು ; ಎಂದ ಮೇಲೆ ಈ ಗೋಕರ್ಣ
ಮಂಡಲೇಶ್ವರತ್ವಕ್ಕೆ ಬೆಲೆಯೇನು ? ನಿಜವಾದ ಹಕ್ಕುದಾರರು ಯಾರು ಇ

ನೆಂದು ತೋರುವುದೇ ಅದರ ಬೆಲೆ. ಅದನ್ನೇ ಪರಿಶೀಲಿಸೋಣ. ಈ ಗ್ರಂಥದಲ್ಲಿ ಮುಂದೆ ಈ ಪಟ್ಟಿಯ ಕ್ರಮಾಂಕದಂತೆ ೩೧ ನೆಯ ರಾಮಚಂದ್ರ ಭಾರತಿಗಳು ಕ್ರಿ. ಶ. ೧೮೨೭ ರಲ್ಲಿ ಕಳಸ ಪ್ರಾಂತದಲ್ಲಿ ಸಂಚರಿಸುತ್ತಿದ್ದಾಗ ಶೃಂಗೇರಿಯ ಶೇಷ ಜೋಶಿಗಳೆಂಬವರು ಇವರ ಹೆಚ್ಚಿನ ಬಿರುದು ಬಾವುಲಿಗಳೆಲ್ಲವನ್ನೂ ಸೆಳೆದು ಸ್ವಾಧೀನಪಡಿಸಿಕೊಂಡುದರ ಕುರಿತಾಗಿ ಇವರು ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರು ಮೈಸೂರು ಅವರಿಗೆ ದೂರಿದುದನ್ನು ಒಡೆಯರು ಮನ್ನಿಸಿ ಸೆಳೆದುಕೊಂಡದ್ದನ್ನೆಲ್ಲಾ ಹಿಂದಿರುಗಿ ಕೊಡಿಸಿ ಕೊಟ್ಟರೆಂದು ಇವರು ಹೇಳಿದರೂ ಇದರ ಮಾರನೆಯ ವರ್ಷ ಎಂದರೆ 1828 ನೇ ಇಸವಿಯಲ್ಲಿ ಈ ಕೃಷ್ಣರಾಜೇಂದ್ರ ಒಡೆಯರು ತಮ್ಮ ಕಿಲ್ಲೇದಾರರಿಗೆ ಕಳುಹಿಸಿದ ನಿರೂಪದ ಯಥಾನಕಲನ್ನು ಈ ಕೆಳಗೆ ಕಾಣಿಸಿರುತ್ತೇನೆ.

ನಿರೂಪದ ಯಥಾ ನಕಲು

೩ ಶೃಂಗೇರಿ ಮಠೀಯ ಪ್ರಾಕ್ತನ ಲೇಖನ ಮಾಲಾ ಪುಸ್ತಕದ ಪುಟ – 144–145.

134 ಲೇಖನ. ಸರ್ವಧಾರಿ ಕ್ರಿ. ಶ. 1828–29.

ಸರ್ವಧಾರಿ ಸಂವತ್ಸರದ ಜ್ಯೇಷ್ಠ ಬ. ೮ ಗುರುವಾರದಲ್ಲು ಶ್ರೀಮತು ಅರಮನೆ ಸೀಮೆ ಗಡಿಗಳ ಅಮಿಲ ಕಿಲ್ಲೇದಾರರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ–

ಶೃಂಗೇರಿ ಮಠದ ಶ್ರೀ ಸ್ವಾಮಿಗಳವರ ಆಜ್ಞಾನುಸಾರವಾಗಿ ನಡೆದು ಕೊಳ್ಳತಕ್ಕ ರಾಮಚಂದ್ರಾಪುರ, ಹೊನ್ನೆಹಳ್ಳಿ, ತೀರ್ಥಹಳ್ಳಿ, ಹರಿಹರಪುರ, ಮುಳುಬಾಗಿಲು ಮುಂತಾದ ತುಂಡು ಮಠದವರು ಬಿರುದು ಬಾವುಲಿ, ಶ್ವೇತಭತ್ರ ಮಕರತೋರಣ ಮೊದಲಾದ ಹೆಚ್ಚುಕಟ್ಟಳೆ ಬಿರುದುಗಳು ಹೆಚ್ಚು ವ್ಯಾಸಂಗ ಮಾಡಿ ಕೊಂಡು ತಿರುಗುವುದರಿಂದ ರಾಮಚಂದ್ರಾಪುರ ಮಠದ ಬಿರುದು ಬಾವುಲಿಗಳು ಶ್ರೀ ಶೃಂಗೇರಿ ಮಠಕ್ಕೆ ತೆಗೆದು ಕೊಂಡಿರುವುದು ಸರಿಯಷ್ಟೆ. ಆ

ಬಿರುದು ಬಾವುಲಿಗಳು ಶ್ರೀ ಶೃಂಗೇರಿ ಮಠಕ್ಕೆ ಸಲ್ಲತಕ್ಕದ್ದೇ ಹೊರತ
ಸದರೀ ಇರುವ ತುಂಡುಮಠಕ್ಕೆ ಎಂದೂ ಸಲ್ಲತಕ್ಕದ್ದಲ್ಲ. ಶ್ರೀ ಶೃಂಗೇರಿ
ಮಠದ ಶ್ರೀ ಪಾದ ಪೀಠಕ್ಕೆ ಕಾಣಿಕೆ ಕಪ್ಪಕೊಟ್ಟು ಅಲ್ಲಿನ ಆಜ್ಞಾನುಸಾರ
ನಡೆಯುತ್ತಾ ಇರುವಲ್ಲಿ, ಈಗ ನೂತನ ಪದ್ಧತಿ ನಡೆಸಬಾರದಲ್ಲಾ. ಇನ್ನು
ಯಾರಾದರೂ ಈ ತುಂಡು ಮಠದ ಸಂನ್ಯಾಸಿಗಳು ತಮ್ಮ ತಮ್ಮ ಆಶ್ರಮ
ಧರ್ಮದಲ್ಲಿ ವಿಹಿತವಾಗಿರದೆ ಇಲ್ಲದ ಹವ್ಯಾಸ, ಬಿರದು ಬಾವುಲಿಗಳು ಮಾಡಿ
ಕೊಂಡು ಮನಸ್ವೀ ನಡೆದಲ್ಲಿ ಶ್ರೀ ಮಠದವರು ವಿಚಾರಿಸಿ ಅದಕ್ಕೆ ತಕ್ಕ
ಬಂದೋಬಸ್ತು ಮಾಡಿಸಿಯಾರು. ಈ ವಿಚಾರವಾಗಿ ಶ್ರೀ ಮಠದವರು ನಿಮ್ಮ
ನಿಮ್ಮ ಸಂಗಡ ಹೇಳಿದಲ್ಲಿ ಇದಕ್ಕೆ ತಕ್ಕ ಬಂದೋಬಸ್ತು ಮಾಡಿಸಿಕೊಟ್ಟು
ಆ ಬಗ್ಗೆ ಹೆಚ್ಚುಕಟ್ಟಳೆ ಬಿರುದು ಬಾವುಲಿಗಳು ಶ್ರೀ ಮಠಕ್ಕೆ ಕೊಡಿಸಿಕೊಟ್ಟು
ಮುಂದೆ ಇಂಥ ಹವ್ಯಾಸ ಪದ್ಧತಿ ನಡೆಯದೆ ಶ್ರೀ ಮಠದ ಅಪ್ಪಣೆ ಪ್ರಕಾರ
ನಡೆಮುಕೊಳ್ಳುವಂತೆ ಹೇಳುವುದು. ತಾ|| ೫ ಮಾಹೆ ಜೂನ್ ಸಂ|| ೧೮೨೮ನೇ
ಇಸವಿ ಎಂದಿರುವುದು. ಇದನ್ನು ಶ್ರೀ ಡಾ|| ಅಚ್ಯುತಶರ್ಮರು ೧೯೭೦ನೇ
ಇಸವಿಯಲ್ಲಿ ಬರೆದ "ಶ್ರೀ ಕುಕ್ಕೇ ಸುಬ್ರಹ್ಮಣ್ಯ ಕ್ಷೇತ್ರದ ಐತಿಹಾಸಿಕ
ಹಿನ್ನೆಲೆ" ಎಂಬ ಗ್ರಂಥದಿಂದಲೂ ಮೇಲೆ ಬರೆದ ನಿರೂಪವನ್ನು ಕಂಡು
ಕೊಳ್ಳಬಹುದು. ಜಗದ್ಗುರುಗಳೆಂಬುದು ಮನೆ ಮಾತಾಗಿರುವುದೆಂತಲೂ
ಬರೆದಿರುತ್ತಾರೆ.

ಇದರಿಂದ ೧೮೨೮ನೆಯ ಇಸವಿಯವರೆಗೂ ರಾಮಚಂದ್ರಾಪುರ ಮಠ
ಮೊದಲಾದವುಗಳು ತುಂಡು ಮಠಗಳೆಂತಲೂ ಇವರೆಲ್ಲರೂ ಶೃಂಗೇರಿ ಮಠಕ್ಕೆ
ಕಪ್ಪಕಾಣಿಕೆ ಕೊಟ್ಟು ಆಜ್ಞಾನುಸಾರ ನಡೆಯಬೇಕೆಂತಲೂ ತಿಳಿದು ಬರುತ್ತದೆ.

ಮುಂದೆ ೧೮೩೩ರ ಒಳಗಾಗಿ ೩೨ನೇ ರಾಘವೇಂದ್ರ ಭಾರತಿಗಳು
ಪೀಠಾಧಿಪತಿಗಳಾದರು. ಭಾರತದಲ್ಲಿ ಬ್ರಿಟಿಷರು ಪ್ರಬಲರಾಗುತ್ತಾ ಬಂದರು.
ದೇಶಿಯ ರಾಜರು ಅವರ ಆಜ್ಞಾನುವರ್ತಿಗಳಾದರು. ಜಾತಿ, ಜಾತಿಗಳ
ಧರ್ಮಾಚರಣೆಗಳ ಕುರಿತು ಅಂತಿಮ ತೀರ್ಮಾನವು ಮಠಪತಿಗಳ
ದೆಂದಾಯಿತು. ಈ ಕಾಲದಲ್ಲಿಯೇ ಈ ರಾಘವೇಂದ್ರ ಭಾರತಿಗಳು ತಮ್ಮ
ಸನದು ಸೂತ್ರಗಳ ಉದ್ಧಾರಕ್ಕಾಗಿ ಬ್ರಿಟಿಷ್ ನ್ಯಾಯಾಲಯವನ್ನು

ಪ್ರವೇಶಿಸಿದರೆಂದು ತಿಳಿಯಬಹುದಾಗಿದೆ. ಆದ್ದರಿಂದಲೇ ಹಿಂದೆ ಹೇಳಿದ ಇಮ್ಮಡಿ ದೇವರಾಯರು ಕೊಟ್ಟದ್ದೆಂಬ ಇವರ ಎರಡನೆಯ ತಾಮ್ರ ಶಾಸನದ ಅಂತ್ಯದಲ್ಲಿ ‹‹ ಇಂಗ್ಲೀಷ್ ಸಹಿ ಉಂಟು. ಶ್ರೀ ರಾಘವೇಂದ್ರ ಭಾರತಿಗಳ ವಕೀಲ ಮಂಜುನಾಥಯ್ಯ ’’ ವಿಲೆ ನಂಬ್ರ ಮೊದಲಾದ ಸ್ಪಷ್ಟಾರ್ಥಗಳನ್ನು ಕೊಡದ ಶಬ್ದಜಾಲಗಳಿಂದ ತುಂಬಿರುವುದೆಂದು ಈಗ ಅನುಮಾನದಿಂದ ತಿಳಿಯ ಬಹುದಾಗಿದೆ. ನ್ಯಾಯ ಕೋರ್ಟಿನಲ್ಲಾದ ಜಯಾಪಜಯಗಳ ವಿಷಯಗಳು ನಮಗೆ ಗೊತ್ತಿಲ್ಲವಾದರೂ ಸತ್ಯವು ಲೋಕದ ಮುಂದೆ ಸತ್ಯವಾಗಿಯೇ ಉಳಿಯುವುದೆಂದು ಎಲ್ಲರ ಅನುಭವದ ಮಾತಾಗಿದೆ.

ಶ್ರೀ ಮದ್ರಾಮಚಂದ್ರಾಪುರ ಮಠಪತಿಗಳಲ್ಲಿ ಮಂಗಳೂರು ಹೋಬಳಿಗೆ ಪ್ರಥಮತಃ ಪದಾರ್ಪಣ ಮಾಡಿದವರು ಈ ೩೨ನೇ ರಾಘವೇಂದ್ರ ಭಾರತಿಗಳೆಂದು ಹಿರಿಯರ ಹೇಳಿಕೆಯಿಂದ ತಿಳಿದು ಬಂದದ್ದಾಗಿದೆ. ಇದಕ್ಕೆ ಮೊದಲು ಬಹಳ ಹಿಂದಿನಿಂದಲೇ ನಡೆದು ಬಂದ ಹವ್ಯಕರ ಧರ್ಮಾಧಿಕಾರಿಗಳಾದ ಸಭಾಹಿತ ಮನೆತನದವರು ಆಗಾಗ ಇಲ್ಲಿಗೆ ಬಂದು ವಿಚಾರಣೆ ನಡೆಸಿ ಧರ್ಮನಿರ್ಣಯವನ್ನು ನೀಡುತಿದ್ದರೆಂದೂ ಹಿಂದಿನವರ ಹೇಳಿಕೆಯಿಂದ ಗೊತ್ತಾದುದಾಗಿದೆ.

ಈ ಸಭಾಹಿತರು ಸುಮಾರು ಕ್ರಿ. ಶ. ೧೮೦೦ರ ಪೂರ್ವಾರ್ಧದಲ್ಲಿ ವಿಟ್ಲ ಸೀಮೆಯ ಪುಣಚ ಗ್ರಾಮದ ಮೂಡಂಬೈಲು ಮನೆತನದ ಈಗಲೂ ಆ. ವಿ. ಶಾಸ್ತ್ರಿಗಳೆಂದು ಹೇಳಿಕೊಳ್ಳುವ ರಾಮಕೃಷ್ಣಶಾಸ್ತ್ರಿಗಳ ಹಿರಿಯರಿಗೆ ಈ ಧರ್ಮಾಧಿಕಾರವನ್ನು ಹಸ್ತಾಂತರಿಸಿದರೆಂದು ಜನಜನಿತವಾಗಿ ತಿಳಿದು ಬಂದುದಾಗಿದೆ. ಆಮೇಲೆ ಈ ಅಧಿಕಾರವನ್ನು ಈ ಮನೆತನದವರು ಕೆಲವು ಕಾಲದ ವರೆಗೆ ನಡೆಸುತ್ತಾ ಬಂದಿದ್ದರೂ ಈ ಅಧಿಕಾರವನ್ನು ಸಾಂಸಾರಿಕರಿಗಿಂತ ಸಂನ್ಯಾಸಿಗಳೇ ನಡೆಯಿಸುವುದು ಯೋಗ್ಯವೆಂದು ನಿರ್ಣಯಿಸಿ ಹೋಬಳಿ ಗುರಿಕಾರರಾದಿ ವೈದಿಕ ಗೃಹಸ್ಥರ ಸಮ್ಮತಿ ಪಡೆದು ಶ್ರೀ ಮದ್ರಾಮಚಂದ್ರಾಪುರ ಮಠಕ್ಕೆ ಈ ರಾಘವೇಂದ್ರಸ್ವಾಮಿಗಳ ಮೂಲಕ ಬಿಟ್ಟು ಕೊಟ್ಟರೆಂದು ತಿಳಿದು ಬರುತ್ತದೆ. ಆದರೆ ಹೀಗೆ ಬಿಟ್ಟುಕೊಡುವಾಗ ಇಕ್ಕಡೆಯವರು ಕೆಲವು ಕಟ್ಟುಪಾಡುಗಳನ್ನು ಇಟ್ಟುಕೊಂಡು ಅದರಂತೆ ನಡೆಯುತಿದ್ದರೆಂಬುದಕ್ಕೆ

ಈ ಮೂಡಂಬೈಲು ಶಾಸ್ತ್ರಿಗಳಾದಿಯಾಗಿ ಜೋಡುಸಾಟಿಯ ಹೋಬಳಿ
ಗುರಿಕ್ಕಾರರೆಂಬ ಆರೇಳು ಮನೆಯವರ ಒಪ್ಪಿಗೆ ಪಡೆದೇ ಇಲ್ಲಿಗೆ ಸವಾ
ಬರುವ ರೂಢಿಯು ಬಳಕೆಯಲ್ಲಿದ್ದು, ಇವರಿಗೆ ಸಮಯಾವಕಾಶವಿಲ್ಲದಿದ್ದ
ಮೂರು ವರ್ಷಕ್ಕೊಮ್ಮೆ ಬರುವ ಸವಾರಿಯು ಆರು ವರ್ಷ ಇಲ್ಲವೆ ಅದಕ್ಕೂ
ಮಿಕ್ಕಿ ಮುಂದರಿಯುತಿದ್ದುದು ಸರ್ವ ವೇದ್ಯವಾಗಿದೆ. ಸವಾರಿಯು ಇಲ್ಲಿಗ
ಚಿತ್ತೈಸಿದ ಒಡನೆಯೇ ಮೊದಲಾಗಿ ತಂಗುವ ಸ್ಥಳವು ಕುಪ್ಪುಚಾರು ಮ
ಭಟ್ಟರಿಂದ ಸ್ಥಾಪಿತವಾದ ಪಾಣೆ ಮಂಗಳೂರು ಕಲ್ಲಡ್ಕ ಗೇರುಕಟ್ಟೆಯ ಅನ್ನ
ಸತ್ರ. ಇಲ್ಲಿ ಹೋಬಳಿಯ ಮುಖ್ಯಸ್ಥರೆಲ್ಲರೂ ನೆರೆದು ಮುಂದಿನ ಸಂಚಾರ
ಕಾರ್ಯಕ್ರಮವನ್ನು ಇಲ್ಲಿಯೇ ನಿರ್ಣಯಿಸುವುದೂ, ಸವಾರಿಯು ತೆರಳ
ವಾಗ ಇಲ್ಲಿಯೇ ಇದ್ದು ಉಳಿದಿರಬಹುದಾದ ವಿಚಾರಣೆಗಳನ್ನು ಪೂರ್ತಿ
ಗೊಳಿಸಿ ಇಲ್ಲಿಂದಲೇ ತೆರಳುವುದೂ ಸರ್ವವಿದಿತ.

ಈ ೩೨ನೇ ರಾಘವೇಂದ್ರ ಭಾರತಿಗಳ ಕಾಲದಲ್ಲಿ ಹೀಗೆಯೇ ನಡೆದಿದ
ಯೆಂದು ಕೇಳಿದ್ದೇನೆ. ಇವರ ವಿಷಯದಲ್ಲಿ ನನಗೇನೂ ಹೆಚ್ಚು ತಿಳಿಯದು.
ಆಮೇಲೆ ಮಠಪತಿಗಳಾದವರು ೩೩ನೇ ರಾಘವೇಶ್ವರ ಭಾರತಿಗಳು.
ಇವರ ಜೀವಮಾನದ ಪೂರ್ವಾರ್ಧದ ವಿಷಯವು ನನಗೆ ತಿಳಿಯದು.
ಉತ್ತರಾರ್ಧ(ಕಾಲ)ದಲ್ಲಿ ಇಲ್ಲಿ ನಡೆದ ವಿಶೇಷ ಘಟನೆಯೆಂದರೆ ಮೂಡಂಬೈಲು
ಮನೆತನಕ್ಕೆ ಸೇರಿದ ಚ|| ಮಲೆತಡ್ಕ ಈಶ್ವರಶಾಸ್ತ್ರಿ, ಚ|| ಮಣೆಲ ವಿಷ್ಣುಶಾಸ್ತ್ರಿ
ಸೀಮೆಯ ೧ನೇ ಗುರಿಕಾರ ನೆಡ್ಲೆಪುಟ್ಟಣ್ಣಭಟ್ಟ ಹೀಗೆ ಈ ಮೂವರು
ಬಹಿಷ್ಕೃತರಾದುದು. ಇದಕ್ಕೆ ವಿಟ್ಲ ಪಂಚಲಿಂಗೇಶ್ವರ ದೇವಸ್ಥಾನದ
ಜೀರ್ಣೋದ್ಧಾರ ಬ್ರಹ್ಮಕಲಶ ಸಮಾರಂಭದಲ್ಲಿ ಮೊದಲೇ ಬಹಿಷ್ಕೃತರಾಗಿದ್ದ
ಪಾದೆಕಲ್ಲು ಗಣಪತಿಭಟ್ಟರನ್ನು ಕೂಡಿ ವರ್ತಿಸಿದ್ದೇ ಮುಖ್ಯಕಾರಣ.

ಇದರಿಂದಾಗಿ ಈ ಬಹಿಷ್ಕೃತ ತ್ರಯರೊಂದಿಗೆ ಸುಮಾರು ಐನೂರು ಮನೆ
ಯವರು ರಾಮಚಂದ್ರಾಪುರ ಮಠವನ್ನು ಬಿಟ್ಟು ಶೃಂಗೇರಿಯ ಮಠಕ್ಕೆ
ಸೇರಿದ್ದು. ಶ್ರೀಗಳವರ ಮೇಲೆ ಈಶ್ವರಶಾಸ್ತ್ರಿಗಳು ಮಾನನಷ್ಟದ ಕೋರ್ಟು
ವ್ಯವಹಾರಣೆ ನಡೆಸಿದ್ದು; ಶೃಂಗೇರಿಯ ಪ್ರಾತಿನಿಧ್ಯವನ್ನು ಪಡೆದು ಈ ಈಶ್ವರ
ಶಾಸ್ತ್ರಿಗಳು ಶ್ರೀಗಳವರ ಬಿರುದು ಬಾವುಲಿಗಳನ್ನು ಕೋರ್ಟು ಹುಕು

ಆಧಾರವ ಮೇಲೆ ಕಿತ್ತೆಸೆಯುವ ಕಾರ್ಯದಲ್ಲಿ ಮುಂದಾದದ್ದು. ನೀರ ಹೋಮದಂತೆ, ಇವೆಲ್ಲಾ ವ್ಯರ್ಥವಾಗಿತ್ತು. ಆದರೂ ಇವರು ಮತ್ತು ನೆಡ್ಲೆ ಪುಟ್ಟಣ್ಣಭಟ್ಟರು ಇದು ಅನ್ಯಾಯದ ಬಹಿಷ್ಕಾರವೆಂದು ತಮ್ಮ ಅವಸಾನದ ವರೆಗೂ ಪುರುಷ ಸಿಂಹರಾಗಿಯೇ ಬಾಳಿ ತೀರಿ ಕೊಂಡರು. ವಿಷ್ಣುಶಾಸ್ತ್ರಿಗಳು ಕಾರಣಾಂತರದಿಂದ ಶ್ರೀಗಳವರೊಂದಿಗೆ ರಾಜಿಮಾಡಿಕೊಂಡಿದ್ದರೆಂದು ನೆನಪು.

ಅನಂತರ ಪೀಠಕ್ಕೆ ಬಂದವರು, ೩೪ನೇ ರಾಮಚಂದ್ರ ಭಾರತಿಗಳು. ಬಹಿಷ್ಕೃತ ಚ॥ ಮಲೆತಡ್ಕ ಈಶ್ವರಶಾಸ್ತ್ರಿಗಳ ತಮ್ಮ ಎಂದರೆ (ವಕೀಲ ಸಿ.ಎಸ್. ಶಾಸ್ತ್ರಿಗಳ ತಂದೆ) ವೆಂಕಟರಮಣ ಶಾಸ್ತ್ರಿಗಳು ಶ್ರೀಗಳವರನ್ನು ತಮ್ಮ ಮನೆಗೆ ಬರಮಾಡಿಕೊಂಡು ಇವರೊಂದಿಗೆ ರಾಜಿಮಾಡಿಕೊಂಡರು. ಆ ಮೇಲೆ ಈ ವೆಂಕಟರಮಣ ಶಾಸ್ತ್ರಿಗಳು ತಮ್ಮ ಜೀವಮಾನದ ಕೊನೆಯ ಪರ್ಯಂತವೂ ಶ್ರೀಯವರ ಮಂಗಳೂರು ಹೋಬಳಿಯ ಸಂಚಾರದ ಸಂಚಾಲಕರಾಗಿಯೇ ಇದ್ದರು. ನಿಸ್ಸಂತತಿಯವರಾಗಿದ್ದು ತೀರಿ ಹೋದ ನಮ್ಮ ಬಡೆಕಿಲದವರ ಹಿರಿಯ ಭಾಗದವರಾದ ಹತ್ತುವಕ್ಲು (ಪೆರಗೋಳು) ರಾಮ ಭಟ್ಟರ ತರುವಾಯ ಬಹಳ ಕಾಲ ಬಳಕೆಯಲ್ಲಿ ಬಾರದೆ ಹೋದ ನಮ್ಮ ಮನೆತನಕ್ಕಿದ್ದ ಜೋಡುಸಾಟಿಯ ಹೋಬಳಿ ಗುರಿಕ್ಕಾರಿಕೆಯ ಮರ್ಯಾದೆಯನ್ನು ಆನು ವಂಶಿಕ ಪದ್ಧತಿಯಂತೆ ಬಡೆಕ್ಕಿಲಕ್ಕೆ ಸ್ಥಾಪಿಸಿದವರು ಇವರೇ ಆಗಿರುತ್ತಾರೆ. ಗೀತಾಸಾರವೆಂಬ ನನ್ನ ಕನ್ನಡ ಭಾಮಿನೀಷಟ್ಪದೀ ಗ್ರಂಥಕ್ಕೆ ಇವರೇ ಹೆಚ್ಚಿನ ಪ್ರೇರಕರು.

ವೈಜಯಂತೀ ಪಂಚಾಂಗವು ಜನ್ಮವೆತ್ತಿದ್ದು ಇವರ ಅಪ್ಪಣೆ ಪ್ರಕಾರವೇ ಆದರೂ ಈ ವಿಷಯದಲ್ಲಿ ಚಕ್ರಕೋಡಿ ಪಂಚಾಂಗ ಕರ್ತರಾದಿಯಾಗಿ ಸಮಾಜದೊಳಗೆ ಉಂಟಾದ ವಾದವಿವಾದಗಳ ಬಗೆಗೆ ಪ್ರತ್ಯಕ್ಷದ ಮುಂದೆ ಇತರ ಧರ್ಮಶಾಸ್ತ್ರಗಳ ಆಧಾರವು ಪ್ರಮಾಣವಾಗಲಾರದೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿ ಆಕ್ಷೇಪವೆತ್ತಿದ ಚಕ್ರಕೋಡಿಯವರನ್ನು ಸಮಾಧಾನ ಪಡಿಸಿ ಐಕ್ಯತೆಯನ್ನು ಸ್ಥಾಪಿಸಿದವರು ಇವರೇ ಆಗಿರುತ್ತಾರೆ.

ನೆಡ್ಲೆಮನೆತನಕ್ಕಿದ್ದ ಜೋಡುಸಾಟಿಯ ಮರ್ಯಾದೆಯು ತನಗಾಗ

ಬೇಕೆಂದು ಬಿನ್ನವತ್ತಳೆಯನ್ನು ಸಲ್ಲಿಸಿದ್ದ ಮಾಳ ನಾರಾಯಣ ಭಟ್ಟರ ಹೇಳಿಕೆಯನ್ನು ತಿರಸ್ಕರಿಸಿ ಬುದ್ಧಿವಂತರ ಅಭಿಪ್ರಾಯದಂತೆ ಅದು ನೆಡ್ಲೆಯವರಲ್ಲಿಯೇ ಇರತಕ್ಕದ್ದೆಂದು ತೀರ್ಮಾನಿಸಿದವರು ಇವರೇ ಆಗಿರುತ್ತಾರೆ. ಪ್ರಪಂಚದ ಚೋದ್ಯಗಳಲ್ಲೊಂದಾದ ಹಸ್ತಿದಂತ ಸಿಂಹಾಸನವು ಇವರ ಪ್ರಯತ್ನದಿಂದಲೇ ರೂಪುಗೊಂಡದ್ದಾಗಿದೆ. ಕಡೆಗೆ ಹಸ್ತೋದಕ ನಿಷೇಧವೂ ಇವರಿಂದಲೇ ಪ್ರಾರಂಭವಾದುದೆಂದು ವಿಷಾದದಿಂದ ಹೇಳ ಬೇಕಾಗಿದೆ.

ಇವರ ತರುವಾಯ ಪೀಠಕ್ಕೆ ಬಂದವರು ೩೫ನೇ (ಈಗಿನ) ರಾಘವೇಂದ್ರ ಭಾರತೀ ಸ್ವಾಮಿಗಳವರು. ಇವರ ಮಂಗಳೂರು ಹೋಬಳಿಯ ಸಂಚಾರ ಕಾರ್ಯಕ್ರಮವು ದಿ|| ಚ|| ಮುಲೆತಡ್ಕ ವೆಂಕಟರಮಣಶಾಸ್ತ್ರಿಗಳಂತೆಯೇ ಇವರ ಮಗ ಪುತ್ತೂರು ವಕೀಲ್ ಸಿ. ಎಸ್. ಶಾಸ್ತ್ರಿಗಳ ಸಂಚಾಲಕತ್ವದಿಂದ ಪೂರ್ವ ಪದ್ಧತಿಗೆ ಅನುಗುಣವಾಗಿತ್ತಾದರೂ ಪ್ರಥಮ ಸವಾರಿಯಲ್ಲಿಯೇ ಹಸ್ತೋದಕ ನಿಷೇಧದೊಂದಿಗೆ ಪಾದಪೂಜೆಯನ್ನೂ ನಿಷೇಧಿಸಲಾಯಿತು.

ನೆಡ್ಲೆಯವರಿಗೆ ಮೊದಲಾಗಿ ಕೊಡ ಬೇಕಾಗಿದ್ದ ರಾಯಸವು ಗೊಂದಲದಲ್ಲಿ ಬೀಳುವಂತಾಯಿತು. ದಿನಗಳೆದಂತೆ ಇವರ ಕಾರ್ಯಕ್ರಮಗಳು ಬದಲಾಗುತ್ತಾ ಬಂದವು. ನಗದು ಹಣದ ಕಾಣಿಕೆಯೇ ಇವರಿಗೆ ಪ್ರಧಾನವಾಯಿತು. ಮಾಳದವರು ಬಯಸುವ ಜೋಡು ಸಾಟಿಯ ಹಂಬಲಕ್ಕೆ ಬೆಂಬಲ ದೊರೆಯಿತು. ದುಡ್ಡಿದ್ದವರೇ ದೊಡ್ಡಪ್ಪಂದಿರಾದರು. ಧನಿ, ಒಕ್ಕಲುಗಳ, ತಂದೆ ಮಕ್ಕಳ, ಅಣ್ಣ ತಮ್ಮಂದಿರ, ಗಂಡಹೆಂಡಿರ ಜಗಳಗಳ ತೀರ್ಮಾನಕ್ಕಾಗಿ ಶ್ರೀಗಳಿದ್ದಲ್ಲಿಗೆ ದೂರುಗಳು ಬರುವಂತಾದುವು. ಶೀಘ್ರ ವಾಹನದ ಅನುಕೂಲವಿದ್ದುದರಿಂದ ಮಠಪತಿಗಳು ಇಷ್ಟವಿದ್ದಾಗ ಇಷ್ಟ ಬಂದೆಡೆಗೆ ಇಷ್ಟಪ್ರಕಾರ ಹೋಗಿ ಬರುವಂತಾಯಿತು. ಕಾರ್ಯಕುಶಲರಾದ ಸ್ವಾಮೀಜಿಯವರು ಸಮಾಜದ ಬಹುಜನರಿಂದ ಜೈ ಅನ್ನಿಸಿ ಕೊಂಡರು. ವೈಜಯಂತೀ ಪಂಚಾಂಗದ ಕುರಿತು, ಇದೇ ಕಳೆದ ದುರ್ಮುಖಿ ಸಂವತ್ಸರದ ಮಾರ್ಗಶೀರ್ಷ ಶು ೧೦ (ದಶಮಿ) ಬುಧವಾರದಂದು ಗೇರುಸೊಪ್ಪಾ ಸೀಮೆ ಮಾಳ್ಕೋಡು.

ಶ್ರೀ ಕ್ಷೇತ್ರಪಾಲ ದೇವಸ್ಥಾನದಿಂದ ನಾರಾಯಣ ಸ್ಮರಣ ಪೂರ್ವಕ ಇತೋಽಪ್ಯತಿಶಯವಾದ ಪ್ರಗತಿಯಲ್ಲಿ ಮುಂದುವರಿಯಲು ಹಾರೈಸುತ್ತೇವೆಂದು ಪಂಚಾಂಗ ಕರ್ತ ಶ್ರೀ ಯಮುರ್ಞಂಜ ಶಂಕರ ಜೋಯಿಸರಿಗೆ ನಿರೂಪವೊಂದನ್ನು ಕಳುಹಿಸಿದ್ದರೂ ಮುಂದೆ ಸುಮಾರು ಆರೇಳು ವರ್ಷಗಳ ತರುವಾಯ ಈ ವೈಜಯಂತೀ ಪಂಚಾಂಗವು ಶಾಸ್ತ್ರ ನಿಷಿದ್ಧವೆಂದೂ ಕರ್ಮಾರ್ಹವಲ್ಲವೆಂದೂ ಲೇಖನ, ಭಾಷಣಗಳ ಮೂಲಕ ಪ್ರಚಾರ ನಡೆಸುತ್ತಿದ್ದುದಲ್ಲದೆ ಹೆಸರು ದೆಸೆಗಳಿಲ್ಲದ ಪಂಚಾಂಗ ಸಮಿತಿಯೊಂದನ್ನು ತಾವೇ ಸ್ಥಾಪಿಸಿ ಧಾರ್ಮಿಕ ಪಂಚಾಂಗವೆಂಬ ಹೆಸರಿನ ಪಂಚಾಂಗಗಳನ್ನು ಮುದ್ರಿಸಿ ಇದರಂತೆ ಎಲ್ಲರೂ ಆಚರಿಸ ಬೇಕೆಂದು ಒತ್ತಾಯಿಸಲಾಯಿತು. ಇವುಗಳಿಗೆಲ್ಲಾ ಮುಖ್ಯ ಕಾರಣ ಕರ್ತರು ಮಠಪತಿಗಳೆಂದು ಕೆಲವರ ಮತವಿದ್ದರೂ ಈಗಿನ ರಾಜಕಾರಣಿಗಳಂತೆ ಪ್ರತಿಷ್ಠೆಗಾಗಿ ಹೆಣಗುವ ಶ್ರೀಮಂತರೂ, ಹೋಬಳಿ ಮುಖ್ಯಸ್ಥರೆನ್ನುವವರೂ ಕೆಲವರು ಕಾರಣೀಭೂತರೆಂದು ಹೇಳಬಹುದಾಗಿದೆ. ಮತ್ತೆ ಕೆಲವರು ಇತರರ ಮಾತಿನಿಂದ ಪ್ರೇರಿತರಾಗಿ ಯಾವ ಅನನ್ವಿತ ಕಾರ್ಯಕ್ಕಾದರೂ ಮುಂದಾಗುವುದು, ಆಮೇಲೆ ತಮ್ಮ ಕಾರ್ಯವೇ ಸರಿಯೆಂದು ವಾದಿಸುವರು. ಪಾದಪೂಜೆ ಹಸ್ತೋದಕಗಳಿಲ್ಲದ ಯತಿ ಸಂತರ್ಪಣೆಯು ಭಿಕ್ಷೆಯೆಂದಾಗ ಬಹುದೇ ?

ತನಗೆ ಸಂನ್ಯಾಸ ದೀಕ್ಷೆಯನ್ನು ಕೊಟ್ಟು ಆಚಾರ್ಯ ಪೀಠಕ್ಕೆ ಕೈವರ್ತಿಸಿದ ಗುರು ಮಹಾರಾಯನ ತೀರ್ಮಾನವನ್ನು ತಿರಸ್ಕರಿಸುವುದು ಧರ್ಮವಾಗಬಹುದೇ ?

ಸಂಧಿಗ್ಧ ಪರಿಸ್ಥಿತಿಯಲ್ಲಿ ಧರ್ಮ ನಿರ್ಣಯಾಧಿಕಾರವು ವಿದ್ವತ್ಸಭೆಯ ಆಧೀನವೆಂದು ಶ್ರೀಮಚ್ಛಂಕರಾಚಾರ್ಯರು ಮಠಾಮ್ನಾಯದಲ್ಲಿ ಸ್ಪಷ್ಟವಾಗಿ ನಿರೂಪಿಸಿರುವಾಗ ಏಕ ಸತ್ತಾಧಿಕಾರ ಧರ್ಮ ನಿರ್ಣಯವು ಮಾನ್ಯವಾಗಬಹುದೇ ?

ಇತಿಹಾಸ ಗ್ರಂಥವನ್ನು ಬರೆದ ಶ್ರೀ ಬರಿಗೆಯವರು ಇದು ಕರಡು ಪ್ರತಿಯೆಂದು ಎರಡೆರಡು ಬಾರಿಯೂ ಹೇಳಿ ಮತ್ತೆ ಮತ್ತೆ ಆ ಗ್ರಂಥವನ್ನು

ಶ್ರೀಗಳವರಿಗೆ ಸಮರ್ಪಿಸಿದ್ದು, ಅವರು ತಿರುತಿರುಗಿ ಮಹಾಶೀರ್ವಾದ ಪ್ರಸಾದವನ್ನು ದಯಪಾಲಿಸಿದ್ದು ಪ್ರಕಾಶನ ಸಮಿತಿಯವರು ಪ್ರಕಾಶ ಪಡಿಸಿದ್ದು ಇವರಿಗೆ ಭೂಷಣವೆನಿಸುವುದೇ ?

ಇದನ್ನೆಲ್ಲಾ ನೋಡಿಯೂ ಕೇಳಿಯೂ ಮಹಾಮಹಿಮರಾದ ವಸಿಷ್ಠ, ಕಶ್ಯಪ, ಭರದ್ವಾಜ, ಗೌತಮ, ಆಂಗೀರಸ, ವಿಶ್ವಾಮಿತ್ರ, ಜಮದಗ್ನಿಗಳೆಂಬ ಸಪ್ತ‌ಋಷಿಗಳ ಗೋತ್ರಜರಾದ ನಮಗೆ ನೀತಿ ಅನೀತಿಗಳ ಬಗೆಗೆ ಕಿಂಚಿತ್ತಾದರೂ ತಿಳುವಳಿಕೆ ಇಲ್ಲದೆ ಹೋದದ್ದು ನಮ್ಮ ದೌರ್ಭಾಗ್ಯವೇ ಸರಿ. ಆದುದರಿಂದ ಹಿಂದೆ ಹೇಳಿದ ಹೊಳೆನರಸೀಪುರದ ಸಚ್ಚಿದಾನಂದೇಂದ್ರ ಸ್ವಾಮಿಗಳವರು ಅನೇಕ ಗ್ರಂಥಗಳನ್ನು ನೋಡಿ ೧೯೬೩ನೇ ಇಸವಿಯಲ್ಲಿ ಬರೆದ ಶ್ರೀ ಶಂಕರಭಗವತ್ಪಾದ ವೃತ್ತಾಂತ ಸಾರಸರ್ವಸ್ವವೆಂಬ ತಮ್ಮ ಗ್ರಂಥದ ಪೀಠಿಕೆಯಲ್ಲಿ "ನಮ್ಮ ದುರದೃಷ್ಟದಿಂದ ಜಗದ್ಗುರುಗಳಾದ ಆ ಆಚಾರ್ಯರ ವಿಷಯದಲ್ಲಿ ನಿಜವಾದ ಚರಿತ್ರೆಯನ್ನು ಬರೆದಿರುವ ಒಂದು ಗ್ರಂಥವೂ ಉಪಲಬ್ಧವಾಗಿಲ್ಲ; ಸಿಕ್ಕುವ ಆಶೆಯೂ ಇಲ್ಲ. ಮತ್ತು ಅಲ್ಲಲ್ಲಿ ಆಚಾರ್ಯರಿಗೆ ಸಂಬಂಧಿಸಿದಂತೆ ಬರೆದಿರುವ ಕಟ್ಟುಕತೆಗಳ ಸಂಗ್ರಹ ಗ್ರಂಥಗಳ ಆಧಾರದಿಂದ ಅವರು ಸ್ಥಾಪಿಸಿದರೆಂಬ ಹೆಸರಿನ ಸಂಸ್ಥೆಗಳು ಬರೆಯಿಸಿ ಇಟ್ಟುಕೊಂಡಿರುವ ಆಧಾರಗಳಲ್ಲದೆ ಇನ್ನೇನೂ ಸಿಕ್ಕಲಿಲ್ಲವೆಂದು" ನಿರಾಶಾವಾದಿಗಳಾಗಿ ಪಶ್ಚಾತ್ತಾಪದಿಂದ ಹೇಳಿರುವುದಕ್ಕೆ ನಾವು ದನಿಗೂಡಿಸುವಂತಾಗಿದೆ.

ಆದರೂ ಮಂಗಳೂರು ಹೋಬಳಿಯವರಾದ ನಮಗೆ ಈವರೆಗೂ ಶ್ರೀ ಮಠದ ವಿಷಯವಾಗಲಿ, ಮಠಕ್ಕೂ ಸಮಾಜಕ್ಕೂ ಇರುವ ಸಂಬಂಧವಾಗಲಿ ಮಠಪತಿಗಳು ಸಮಾಜ ಪ್ರಮುಖರಿಗೆ ಕಳುಹಿಸಿಕೊಡುವ ರಾಯಸ (ನಿರೂಪ)ಗಳಿಂದ ಎಷ್ಟು ತಿಳಿದುಕೊಳ್ಳಬಹುದೋ ಅಷ್ಟೇ ಅಲ್ಲದೆ ಹೆಚ್ಚೇನೂ ತಿಳಿಯುವಂತಿದ್ದಿಲ್ಲ. ಸಮಾಜದ ವಾದವಿವಾದಗಳ ಬಿನ್ನವತ್ತಳೆ, ವಾಜ್ಯಮೂಲ ಅವುಗಳಿಗಾದ ತೀರ್ಮಾನ ಮುಂತಾದ ದಾಖಲೆಗಳ ಯಥಾ ನಕಲುಗಳ ಚೂರು ಕಾಗದದ ತುಂಡುಗಳಾದರೂ ನಮ್ಮಲ್ಲಿರುವುದಿಲ್ಲ. ಮಠಪತಿಗಳು ನಮಗೆ ಕೊಡುವ ಪದ್ಧತಿಯೂ ಇಲ್ಲ. ಆದುದರಿಂದ ಹವ್ಯಕ ಸಮಾಜ ಮತ್ತು

ಶ್ರೀಗುರು ಮಠದ ಇತಿಹಾಸವೆಂಬ ಈ ಗ್ರಂಥವು ಸಂದೇಹಾಸ್ಪದವಾದರೂ ಕತ್ತಲೆಯ ಪ್ರಯಾಣಿಕನ ದಾರಿಯ ಮಿಣುಕು ದೀಪದಂತಿದೆ, ಎಂದು ನನ್ನ ಅಭಿಪ್ರಾಯ. ಇದಕ್ಕಾಗಿ ಶ್ರೀ ಶ್ರೀಗಳನ್ನು ಮನಸಾ ವಂದಿಸಲಾಗಿದೆ. ಗ್ರಂಥಕರ್ತ ಮತ್ತು ಪ್ರಕಾಶನ ಸಮಿತಿಯವರಿಗೆ ಕೃತಜ್ಞನಾಗಿದ್ದೇನೆ.

ನಾನು ಬರೆದ ಈ ಚಿಕ್ಕ ಪುಸ್ತಕದಲ್ಲಿ ಎಂಬತ್ತೇಳರ ಮುದುಕನಾದ ನನ್ನಿಂದ ಪ್ರಮಾದವಶಾತ್ ಉಂಟಾಗಿರ ಬಹುದಾದ ಲೋಪ-ದೋಷಗಳು ಇರುವುವೆಂದಾದರೆ ಸುಹೃದಯರಾದ ಓದುಗರು ತಿಳಿಸುವ ಕೃಪೆದೋರಬೇಕೆಂದು ವಿಜ್ಞಾಪಿಸುವುದರೊಂದಿಗೆ ಹಾಗೆಯೇ ತಿದ್ದಿಕೊಳ್ಳುವೆನೆಂದು ವಿನಮ್ರನಾಗಿ ಹೇಳ ಬಯಸುತ್ತೇನೆ.

ಉಪಸಂಹಾರ

ಶ್ರೀ ಮದ್ರಾಮಚಂದ್ರಾಪುರದ ಈಗಿನ ಮಠಪತಿಗಳಾದ ಶ್ರೀಮದ್ರಾಘವೇಂದ್ರ ಭಾರತಿಗಳ ಪ್ರೇರಣೆಯಿಂದ ಬರೆಯಲಾದ ಹವ್ಯಕ ಸಮಾಜ ಮತ್ತು ಗುರುಮಠದ ಇತಿಹಾಸವೆಂಬ ಗ್ರಂಥವು ಉಪದೇಶಾಮೃತ ವಾಹಿನಿಯನ್ನು ಹರಸಿ ಮಠಪತಿಗಳ ಘನತೆ, ಗಾಂಭೀರ್ಯಗಳನ್ನು ಹೆಚ್ಚಿಸುವ ಮತ್ತು ಸ್ಥಾನಮಾನಗಳನ್ನು ಭದ್ರಪಡಿಸಲಿಕ್ಕಿರುವ ಹಿತವೂ, ಸುಪ್ರಿಯವೂ ಆದ ಸಾಧನಾ ಗ್ರಂಥವೆಂದಿಷ್ಟೇ ತಿಳಿಯ ಬೇಕಲ್ಲದೆ ಇತಿಹಾಸದ ಸತ್ಯ ಚಿತ್ರಣವನ್ನು ಕಂಡು ಕೊಳ್ಳಬೇಕೆಂಬ ಆಶಾವಾದಿಗಳಿಗೆ ನಿರಾಶೆಯನ್ನೇ ಉಂಟು ಮಾಡುವುದಾಗಿದೆ.

ಹೀಗೆ ನಿರಾಶಾದಾಯಕವಾದ ಈ ಇತಿಹಾಸ ಗ್ರಂಥದ ಕುಂದು ಕೊರತೆಗಳನ್ನು ಮನಗಾಣಿಸಿ ಕೊಟ್ಟು ನಾನು ಬರೆದ ಈ ಸಂದೇಹ ಸೂಚಿ ಎಂಬ ಹೊತ್ತಗೆಯನ್ನು ನೋಡಿದೊಡನೆಯೇ ಮಠಪತಿಗಳ ಪರಮ ಭಕ್ತರಾದ ಮಹನೀಯರಲ್ಲಿ ಮಡಿವಂತರು ಸಚೇಲಸ್ನಾನಕ್ಕೂ ಕ್ರೋಧಾವಿಷ್ಟರು ಕೊಳ್ಳಿಯ ಕಡೆಗೆ ಕೈ ನೀಡುವುದಕ್ಕೂ ಮುಂದಾಗುವವರು ನಮ್ಮಲ್ಲಿರುವರೆಂದು ನನಗೆ ಅನುಭವ ವೇದ್ಯವಾದರೂ ವಿಚಾರಶೀಲರು ಈ ಸಂದೇಹ ಸೂಚಿ ಗ್ರಂಥದ ವಿಷಯದಲ್ಲಿ ಮೆಚ್ಚುವರೆಂದಾದರೆ ಧನ್ಯನೆಂದೇ ಭಾವಿಸಿಕೊಳ್ಳುತ್ತೇನೆ.

ಶ್ರೀಮಚ್ಛಂಕರ ಭಗವತ್ಪಾದರ ಪಾದ ಕಮಲವನ್ನು ನೆನೆದು ಈ ಹೊತ್ತಗೆಯನ್ನು ಪೂರ್ತಿಗೊಳಿಸಿದ್ದೇನೆ.

–ವೆಂಕಟರಮಣಭಟ್ಟ,

ತಾ॥ ೩೦—೧೧—೭೩ ಬಡೆಕ್ಕಿಲ. ಗೀತಾ ಮಂದಿರ

ಪರಾಮರ್ಶೆಗಾಗಿ

ಲೇಖಕರ ಇತರ ಕೃತಿಗಳು

ಗೀತಾಸಾರ

ವಾಜಿಗ್ರಹಣ

ಭೀಮವಿಜಯ

ಸೂಕ್ತಿವಾದ

ಭಾರತ ರಾಜ್ಯ ಭಾರಂ

ಸಮಾಜ ಸಂಗೀತ

ಕರ್ನಾಟಕ ಪರಿಸ್ಥಿತಿ

ಚಿದಾನಂದ ಪ್ರೆಸ್, ಭದ್ರಾವತಿ.